1. ಶ್ರೀ ಗುರುಭ್ಯೋ ನಮಃ ಹರಿಃ ಓಂ ೪
2. ಇಂದು ಎನಗೆ ಗೋವಿಂದ - ಶ್ರೀರಾಘವೇಂದ್ರ ತೀರ್ಥರು ೪
3. ಬಾರೋ ಗುರು ರಾಘವೇಂದ್ರ - ಶ್ರೀಶ ವಿಠಲ ೪
4. ಬಾರೋ ರಾಘವೇಂದ್ರ ಬಾರೋ - ಜಗನ್ನಾಥ ವಿಠಲ ೫
5. ಬಂದಾನು ರಾಘವೇಂದ್ರ ಇಂದಿಲ್ಲಿಗೆ - ಮಧ್ವೇಶ ವಿಠಲ ೫
6. ಪಾದವನು ಕಂಡು ಪಾವನನಾದೆನೊ - ಜನಾರ್ದನ ವಿಠಲ ೬
7. ಕಂಡು ಧನ್ಯನಾದೆ ಗುರುಗಳ - ಮೋಹನ ವಿಠಲ ೬
8. ನಾಮದ ಘನತೆ ಸಲ್ಲುವುದು ನಿಮಗೆ - ಗುರುಗೋಪಾಲ ವಿಠಲ ೭
9. ರಾಘವೇಂದ್ರ ಗುರುಪಾವನ ಕಾಯಾ - ವಿಜಯ ವಿಠಲ ೭
10. ಕರುಣೆಕಾಯೊ ರಾಘವೇಂದ್ರ ಗುರುವೆ - ಗುರುಗೋಪಾಲ ವಿಠಲ ೭
11. ವಂದಿಸುವೆ ಗುರು ರಾಘವೇಂದ್ರಾರ್ಯರ - ಜಗನ್ನಾಥ ವಿಠಲ ೮
12. ಗುರು ರಾಘವೇಂದ್ರರ ಚರಣ - ಗೋಪಾಲವಿಠಲ ೮
13. ನೋಡೆಲೋ ಮನವೇ ಕೊಂಡಾಡು - ಶ್ರೀಶವಿಠಲ ೯
14. ರಥವಾನೇರಿದ ರಾಘವೇಂದ್ರ - ಗೋಪಾಲವಿಠಲ ೧೦
15. ಶರಣರ ಸುರಭೂಜ ಗುರುರಾಜ - ಕಮಲೇಶ ವಿಠಲ ೧೦
16. ಕರುಣೆಗಳೊಳಗೆಣೆಗಾಣೆನೊ - ಜಗನ್ನಾಥವಿಠಲ ೧೦
17. ರಾಘವೇಂದ್ರ ಗುರುರಾಯರ ಸೇವಿಸಿರೋ - ಶ್ರೀದವಿಠ್ಠಲ ೧೧
18. ಭೋ ಯತಿವರದೇಂದ್ರ - ಅನಂತಾದ್ರೀಶ ೧೧
19. ಪೊಂದಿ ಬದುಕಿರೊ - ಜಗನ್ನಾಥವಿಠಲ ೧೨
20. ಕರೆದರೆ ಬರಬಾರದೆ - ಕಮಲೇಶವಿಠಲ ೧೨
21. ರೋಗಹರನೆ ಕೃಪಾಸಾಗರ - ಜಗನ್ನಾಥ ವಿಠಲ ೧೨
22. ನಮೋ ನಮೋ ಶ್ರೀರಾಘವೇಂದ್ರ - ಜಗನ್ನಾಥ ವಿಠಲ ೧೩
23. ಬೃಂದಾವನದಲಿ ರಾಜಿಪ ಯತಿವರನ್ಯಾರೆ - ಶ್ರೀಪತಿ ವಿಠಲ ೧೩
24. ತುಂಗಾತೀರದಿ ನಿಂತ ಸುಯತಿವರನ್ಯಾರೇ - ಅಭಿನವಜನಾರ್ದನ ವಿಠಲ ೧೪
25. ನಿನ್ನ ನಂಬಿದೆ ರಾಘವೇಂದ್ರ - ಗುರುಜಗನ್ನಾಥ ವಿಠಲ ೧೪
26. ಸುರಪನಾಲಯದಂತೆ ಮಂತ್ರಾಲಯ - ಜಗನ್ನಾಥ ವಿಠಲ ೧೫

27. ಬಾಗಿ ಭಜಿಸಿರೋ ರಾಘವೇಂದ್ರ ಯತಿಯಾ - ಅಭಿನವಜನಾರ್ಧನವಿಠಲ ________________ ೧೫
28. ಬಂದದ್ದೆಲ್ಲ ಬರಲಿ ರಾಘವೇಂದ್ರರ ದಯವೊಂದಿರಲಿ - ಅಭಿನವಜನಾರ್ದನವಿಠಲ __________೧೬
29. ರಾಘವೇಂದ್ರ ತೀರ್ಥನೀತ - ಮಧ್ವೇಶವಿಠಲ __________________________________೧೬
30. ರಾಘವೇಂದ್ರ ಯತಿಸಾರ್ವಭೌಮ - ಜಗನ್ನಾಥವಿಠಲ _____________________________೧೭
31. ರಾಯ ಬಾರೋ ತಂದೆ ತಾಯಿ ಬಾರೋ - ಜಗನ್ನಾಥ ವಿಠಲ __________________________೧೭
32. ನಮಿಸಿ ಬೇಡುವೆ ವರಗಳ ನಿನ್ನಾ - ಗುರುಜಗನ್ನಾಥವಿಠಲ __________________________೧೮
33. ಶ್ರೀರಾಘವೇಂದ್ರ ನಿಮ್ಮ ಚಾರುಚರಣವ - ಜಗನ್ನಾಥ ವಿಠಲ _________________________೧೯
34. ರಾಘವೇಂದ್ರ ರಾಜಿತಗುಣಸಾಂದ್ರ - ಜಗನ್ನಾಥವಿಠಲ______________________________೧೯
35. ವೃಂದಾವನವ ನೋಡಿದೇ ರಾಘವೇಂದ್ರ - ಶ್ರೀವೆಂಕಟೇಶವಿಠಲ ______________________೨೦
36. ಚಂದ್ರ ಗುಣಸಾಂದ್ರಾ - ವರದಗೋಪಾಲ ವಿಠಲ _________________________________೨೦
37. ರಾಘವೇಂದ್ರ ಗುರುರಾಯಾ | ನೀ - ಗುರುಜಗನ್ನಾಥವಿಠಲ __________________________೨೧
38. ಎದ್ದು ಬರುತಾರೆ ನೋಡೆ - ಗುರುಜಗನ್ನಾಥವಿಠಲ _________________________________೨೧
39. ಮಂತ್ರಾಲಯ ಮಂದಿರ ಮಾಂ - ಅಭಿನವಜನಾರ್ದನವಿಠಲ___________________________೨೧
40. ಗುರುವೇ ನೀ ಕರುಣಿಸದಿರಲು - ಅಭಿನವಜನಾರ್ದನವಿಠಲ ________________________ ೨೨
41. ನೋಡಿದೆ ಗುರುಗಳ ನೋಡಿದೆ - ವಿಜಯವಿಠಲ ________________________________ ೨೨
42. ರಾಘವೇಂದ್ರ ಗುರುರಾಯ ರಮಣೀಯ - ವಿಜಯವಿಠಲ__________________________ ೨೩
43. ಯಾಕೆ ಮೂಕನದ್ಯೋ - ಜಗನ್ನಾಥ ವಿಠಲ__________________________________ ೨೪
44. ಗುರುರಾಯ ಗುರುರಾಯ - ರಮಾಪತಿ ವಿಠಲ _________________________________ ೨೪
45. ಕೂಸಿನ ಕಂಡೀರ್ಯಾ - ಮಧೇಶ ವಿಠಲ_____________________________________ ೨೪
46. ಬಾರೋ ನಮ್ಮ ಮನೆಗೆ - ಮಧ್ವೇಶ ವಿಠಲ ___________________________________ ೨೫
47. ಕೋರಿ ಕರೆವೆ ಗುರು - ವಿಠಲೇಶ_________________________________________ ೨೬
48. ತುಂಗಾ ತೀರ ವಿರಾಜಂ - ವರ ಕಮಲೇಶ ___________________________________ ೨೬
49. ರಾಘವೇಂದ್ರ ನಮೋ - ವಿಠಲೇಶ________________________________________ ೨೭
50. ಬಂದೇವು ಮಂತ್ರಾಲಯಕೆ ____________________________________________ ೨೭
51. ಬಾಗಿನಮಿಪೆ ಗುರುರಾಘವೇಂದ್ರ - ಸಿರಿಕಾಂತ ವಿಠಲ ____________________________ ೨೮
52. ಬಂದ ದುರಿತವ ಕಳೆಯೋ - ಮಧ್ವೇಶವಿಠಲ _________________________________ ೨೮
53. ಏಕೆ ಬೃಂದಾವನದಿ - ಕಮಲೇಶ ವಿಠಲ ____________________________________ ೨೯

54. ತೂಗೀರೆ ರಾಯರ - ಗುರುಜಗನ್ನಾಥವಿಠಲ ೨೯

55. ಕಾಯೋ ಗುರುರಾಘವೇಂದ್ರ - ಅಭಿನವಜನಾರ್ದನವಿಠಲ ೩೦

56. ರಾಘವೇಂದ್ರ ಪರಾಕು - ಪ್ರಾಣೇಶವಿಠಲ ೩೦

57. ರಾಘವೇಂದ್ರ ನಿಮ್ಮ ಪಾದಸರಸಿಜಕೆ - ಪ್ರಾಣೇಶವಿಠಲ ೩೦

58. ಧರೆಯೊಳಗೆ ನಮ್ಮ ಗುರುರಾಘವೇಂದ್ರ(ಸುಳಾದಿ) - ಗೋಪಾಲದಾಸರು ೩೦

59. ಮಂತ್ರಾಲಯ ನಿವಾಸ - ವಿಜಯವಿಠಲ ೩೨

60. ಪರಮ ಮಂಗಳ ಮೂರುತಿ - ವಿಜಯವಿಠಲ ೩೨

61. ಮುನಿಯ ನೋಡಿರೊ - ಗೋಪಾಲವಿಠಲ ೩೩

62. ವಂದಿಸಿ ನೋಡುವ ಬಾರೆ - ಗೋಪಾಲವಿಠಲ ೩೩

63. ಶರಣು ಶರಣು ರಾಘವೇಂದ್ರ - ಗುರುಗೋಪಾಲವಿಠಲ ೩೪

64. ನಾನ್ಯಾಕೆ ಚಿಂತಿಸಲಿ - ವಾಸುದೇವವಿಠಲ ೩೫

65. ಏಳು ಶ್ರೀಗುರುರಾಯ - ಪ್ರಸನ್ನವೆಂಕಟ ೩೫

66. ತುಂಗಾತೀರದಿ ರಾಜಿಪ ಯತಿಯಾ - ಅಭಿನವಜನಾರ್ದನವಿಠಲ ೩೬

67. ವೃಂದಾವನವ ನೋಡಿರೋ - ವೆಂಕಟವಿಠಲ ೩೬

68. ಈ ಪರಿಯ ಮಹಿಮೆ - ವೆಂಕಟೇಶವಿಠಲ ೩೭

69. ವೃಂದಾವನದಲಿ ನಿಂತ - ಗುರುಜಗನ್ನಾಥವಿಠಲ ೩೭

70. ದಯಮಾಡೋ ದಯಮಾಡೋ - ಗುರುಜಗನ್ನಾಥವಿಠಲ ೩೮

71. ಬಂದ ಶಿರಿರಾಘವೇಂದ್ರಮೂರುತಿ - ಗುರುಜಗನ್ನಾಥವಿಠಲ ೩೮

72. ನೋಡಿದ್ಯಾ ಗುರುರಾಯರ ನೋಡಿದ್ಯಾ - ಗುರುಜಗನ್ನಾಥವಿಠಲ ೩೯

73. ರಾಯರ ನೋಡಿರೈ ಶುಭತಮ - ಗುರುಜಗನ್ನಾಥವಿಠಲ ೪೦

74. ಶರಣು ಶ್ರೀಗುರುರಾಘವೇಂದ್ರಗೆ - ಗುರುಜಗನ್ನಾಥವಿಠಲ ೪೧

75. ರಾಘವೇಂದ್ರ ಕೃಪಾ ಸಾಗರ - ಗುರುಜಗನ್ನಾಥವಿಠಲ ೪೧

76. ಇಂಥಾ ಗುರುಗಳಾ ಕಾಣೆನೋ - ಗುರುಜಗನ್ನಾಥವಿಠಲ ೪೨

77. ರಾಯನೆಂದರೆ ಗುರು ರಾಯ - ಗುರುಜಗನ್ನಾಥವಿಠಲ ೪೨

78. ಎಂತು ಬಣ್ಣಿಸಲಮ್ಮಯ್ಯಾ - ಗುರುಜಗನ್ನಾಥವಿಠಲ ೪೩

79. ಎಂಥಾ ದಯವಂತನೋ - ಗುರುಜಗನ್ನಾಥವಿಠಲ ೪೪

80. ಮಾಮವ ಯತಿಕುಲೋತ್ತುಂಗ - ಗುರುಜಗನ್ನಾಥವಿಠಲ ೪೪

81. *ಗುರುರಾಜಾ ಗುರುರಾಜಾ - ಗುರುಜಗನ್ನಾಥವಿಠಲ* ______________________________ ೪೩

82. *ದಯಾನಿಧೇ ಶ್ರೀರಾಘವೇಂದ್ರ - ಗುರುಜಗನ್ನಾಥವಿಠಲ* ______________________________ ೪೩

83. *ನೀ ಪಾಲಿಸೋ ಗುರುರಾಯ - ಗುರುಜಗನ್ನಾಥವಿಠಲ* ______________________________ ೪೩

84. *ಕಾಯೋ ಕಾಯೋ - ಗುರುಜಗನ್ನಾಥವಿಠಲ* ______________________________ ೪೬

85. *ಶ್ರೀ ಗುರುವರ ಮಾಂ ಪಾಲಯ - ಗುರುಜಗನ್ನಾಥವಿಠಲ* ______________________________ ೪೬

86. *ಶೇಷಾಂಶ ಪ್ರಹ್ಲಾದರಾಯಾ - ಗುರುಜಗನ್ನಾಥವಿಠಲ* ______________________________ ೪೭

87. *ರಥವಾನೇರಿದ ಯತಿವರನ್ಯಾರೇ - ಗುರುಜಗನ್ನಾಥವಿಠಲ* ______________________________ ೪೮

88. *ಸ್ವಸ್ತಿ ಶ್ರೀ ಜಯ ಮಂಗಳಂ - ಗುರುಜಗನ್ನಾಥವಿಠಲ* ______________________________ ೪೮

89. *ಸ್ವಾಮಿ ಲಾಲಿ - ಗುರುಜಗನ್ನಾಥವಿಠಲ* ______________________________ ೪೯

90. *ವಿನಯದಿಂದಲಿ ನಮಿಸುವೆನಾ - ವರದೇಶವಿಠಲ* ______________________________ ೪೯

## ಶ್ರೀ ಗುರುಭ್ಯೋ ನಮಃ ಹರಿಃ ಓಂ

## ಇಂದು ಎನಗೆ ಗೋವಿಂದ - ಶ್ರೀರಾಘವೇಂದ್ರ ತೀರ್ಥರು

ರಾಗ : ಭೈರವಿ ತ್ರಿಪುಟತಾಳ

(ಶ್ರೀ ಮಂತ್ರಾಲಯ ರಾಯರಿಂದ ವಿರಚಿತ)

ಇಂದು ಎನಗೆ ಗೋವಿಂದ । ನಿನ್ನ ಪಾದಾರ । ವಿಂದಾವ ತೋರೋ ಮುಕುಂದ ॥ ಪ ॥
ಸುಂದರ ವದನನೆ ನಂದಗೋಪನ ಕಂದ । ಮಂದರೋದ್ಧರ ಆ । ನಂದ ಇಂದಿರೆರಮಣ ॥ ಅ । ಪ ॥

ನೊಂದೆನಯ್ಯ ಭವಬಂಧನದೊಳು ಸಿಲುಕಿ । ಮುಂದೆ ದಾರಿಕಾಣದೆ ಜಗದೊಳು ॥
ಕಂದನೆಂದೆನ್ನ ಕುಂದುಗಳೆಣಿಸದೆ । ತಂದೆ ಕಾಯೋ ಕೃಷ್ಣ । ಕಂದರ್ಪಜನಕನೆ ॥ ೧ ॥

ಮೂಢತನದಿ ಬಹು ಹೇಡಿ ಜೀವನನಾಗಿ । ದೃಢಭಕುತಿಯನು ಮಾಡಲಿಲ್ಲವೊ ಹರಿಯೇ ॥
ನೋಡಲಿಲ್ಲವೊ ನಿನ್ನ । ಪಾಡಲಿಲ್ಲವೊ ಮಹಿಮೆ ಗಾಡಿಕಾರ ಕೃಷ್ಣ । ಬೇಡಿಕೊಂಬೆನೊ ನಿನ್ನ ॥ ೨ ॥

ಧಾರುಣಿಯೊಳು ಭೂಭಾರ ಜೀವನನಾಗಿ । ದಾರಿತಪ್ಪಿ ನಡೆದೆ ಸೇರಿದೆ ಕುಜನರ ॥
ಆರೂ ಕಾಯುವರಿಲ್ಲ । ಸೇರಿದೆ ನಿನಗಯ್ಯಾ । ಧೀರವೇಣುಗೋಪಾಲ । ಪಾರಗಾಣಿಸೊ ಹರಿಯೇ ॥ ೩ ॥

## ಬಾರೋ ಗುರು ರಾಘವೇಂದ್ರ - ಶ್ರೀಶ ವಿಠಲ

ರಾಗ : ಮಧ್ಯಮಾವತಿ ಅಟತಾಳ

ಬಾರೋ ಗುರುರಾಘವೇಂದ್ರ ಬಾರಯ್ಯ ಬಾ ಬಾ ॥ ಪ ॥
ಹಿಂದುಮುಂದಿಲ್ಲೆನಗೆ ನೀ ಗತಿ । ಯೆಂದು ನಂಬಿದೆ ನಿನ್ನ ಪಾದವ ।
ಬಂಧನವ ಬಿಡಿಸೆನ್ನ ಕರಪಿಡಿ । ನಂದಕಂದ ಮುಕುಂದ ಬಂಧೋ ॥ ಅ । ಪ ॥

ಸೇವಕನೆಲೊ ನಾನು । ಧಾವಿಸಿ ಬಂದೆನು ಸೇವೆಯ ನೀಡೊ ನೀನು ।
ಸೇವಕನ ಸೇವೆಯನು ಸೇವಿಸಿ ಸೇವ್ಯ ಸೇವಕ ಭಾವವೀಯುತ ।
ಠಾವು ಗಾಣಿಸಿ ಪೊರೆಯೊ ಧರೆಯೊಳು ಪಾವನಾತ್ಮಕ ಕಾವಕರುಣೀ ॥ ೧ ॥

ಕರೆದರೆ ಬರಿವಿಯೆಂದೂ । ಸಾರುವುದು ಡಂಗುರ ತ್ವರಿತದಿ ಒದಗೋ ಬಂದು ।
ಜರಿಯ ಬೇಡವೊ ಬರಿದೆ ನಿನ್ನಯ ವಿರಹತಾಳದೆ ಮನದಿ ಕೊರಗುವೆ ।
ಹರಿಯ ಸ್ಮರಣೆಯ ನಿರುತದಲಿ । ಎನಗ್ಗುರುಷದಲಿ ನೀ ನಿರುತ ಕೊಡುತಲಿ ॥ ೨ ॥

ನರಹರಿ ಪ್ರಿಯ ಬಾ । ಗುರು ಶ್ರೀಶವಿಠಲನ ಕರುಣಾಪಾತ್ರನೆ ಬೇಗ ಬಾ ।
ಗುರುವರನೆ ಪರಿಪೋಷಿಸೆನ್ನನು ಮರೆಯದೆಲೆ ತವಚರಣ ಕೋಟೆಯಲಿರಿಸಿ ।
ಚರಣಾಂಬುಜವ ತೋರುತ । ತ್ವರಿತದಲಿ ಓಡೋಡಿ ಬಾ ಬಾ ॥ ೩ ॥

## ಬಾರೋ ರಾಘವೇಂದ್ರ, ಬಾರೋ - ಜಗನ್ನಾಥ ವಿಠಲ

ರಾಗ : ಕಲ್ಯಾಣಿ ಆದಿತಾಳ

ಬಾರೋ ರಾಘವೇಂದ್ರ ಬಾರೋ ಕರುಣ್ಯವಾರಿಧಿಯೆ ಬಾರೊ ।
ಆರಾಧಿಪ ಭಕ್ತರಭೀಷ್ಟ ಪೂರೈಸುವ ಪ್ರಭುವೆ ಬಾರೋ ॥ ಪ ॥

ರಾಜವಂಶೋದ್ಭವನಪಾದಾ ರಾಜೀವ ಭೃಂಗನೆ ಬಾರೋ ।
ರಾಜಾಧಿರಾಜರೊಳು ವಿರಾಜಿಸುವ ಚಲುವ ಬಾರೊ ॥ ೧ ॥

ವ್ಯಾಸರಾಯನೆನಿಸಿ ನೃಪನ ಕ್ಲೇಶ ಕಳೆದವನೆ ಬಾರೊ ।
ಶ್ರೀಸುಧೀಂದ್ರ ಕರಸಂಜಾತ ವಾಸುದೇವಾರ್ಚಕನೆ ಬಾರೊ ॥ ೨ ॥

ಸನ್ಯಾಸಕುಲದೀಪ ಬಾರೊ । ಸನ್ನುತಮಹಿಮನೆ ಬಾರೋ ।
ಮಾನ್ಯ ಜಗನ್ನಾಥ ವಿಠಲನ ಪ್ರಪನ್ನಜನರ ಪ್ರೀಯಾ ಬಾರೋ ॥ ೩ ॥

## ಬಂದಾನು ರಾಘವೇಂದ್ರ, ಇಂದಿಲ್ಲಿಗೆ - ಮಧ್ವೇಶ ವಿಠಲ

ರಾಗ : ಹಿಂದೂಸ್ಥಾನಿ ಕಾಪಿ; ಆದಿತಳ

ಬಂದಾನು ರಾಘಾವೇಂದ್ರ ಇಂದಿಲ್ಲಿಗೆ ॥ ಪ ॥
ಕಂದನ ಮೊರೆ ಕೇಳಿ ಜನನಿಯು ಬರಿವಂತೆ ॥ ಅ । ಪ ॥

ಬಂದಾ । ಜಗದಿತಾನಿಂದಾ ।
ಅಜಪಿತ ರಾಮನ । ಪದಾಬ್ಜಸ್ಮರಿಸುತಲಿ ॥ ೧ ॥
ಹರಿಯ ಕುಣಿಸುತ ಬಂದ । ನರಹರಿಪ್ರಿಯ ಬಂದ ।
ಶರಣಾಗತರನು । ಕರವಪಿಡಿವೆನೆಂದು ॥ ೨ ॥
ಪ್ರಲ್ಹಾದ ವ್ಯಾಸಮುನೀಂದ್ರ ರಾಘವೇಂದ್ರ ।
ನಿಲಿಸುತ ಮನವ ಮಧ್ವೇಶ ವಿಠಲನಲ್ಲಿ ॥ ೩ ॥

## ಪಾದವನು ಕಂಡು ಪಾವನನಾದೆನೊ - ಜನಾರ್ದನ ವಿಠಲ

ರಾಗ : ಆರಭಿ ಝಂಪೆತಾಳ

ಪಾದವನು ಕಂಡು ಪಾವನನಾದೆನೊ ।
ಮೋದಮತಚಂದ್ರ ಗುರುರಾಘವೇಂದ್ರರ ದಿವ್ಯ ॥ ಪ ॥

ಮನೋಭಾವವನು ಕೊಡುವ । ಘನ ಭಕುತರಿಗೆ ಇಂದು ।
ದನುಜದಲ್ಲಣನಂಘ್ರಿ ಮನದಿ ಭಜಿಸಿ ।
ಕನಸಿನಲಿ ಕನಕರಿಸೆ । ವನಜನಾಭನ ಪದವ ।
ವಿನಯದಿಂದಲಿ ತೋರಿ ಮನಮೋದ ಪಡಿಸುವರ ॥ ೧ ॥

ಸೀತಾರಾಮರ ಪೂಜೆ ಆತುರದಲಿ ಮಾಡಿ ।
ನೀತಮಾರ್ಗದಿ ಭೀತರಹಿತನಾದಾ ।
ಆತುರವ ಪರಿಹರಿಸಿ ಶ್ಯಾತಕುಂಭದಂತೆ ।
ಆತುಮವಮಾಡುವ ಅನಿಮಿತ್ತ ಬಂಧುವಿನ ॥ ೨ ॥

ಗುರು ಸುಧೀಂದ್ರರ ವರಕುಮಾರಕರು ಇವರು ।
ಪರಲೋಕ ಸುಖವ ಕೊಡುವ ಪರಮ ಕರುಣಿ ।
ಧರೆಯೊಳಗೆ ಸರಿಗಾಣೆ । ಜನಾರ್ದನ ವಿಠಲನ್ನ ।
ಸ್ಥಿರವಾಗಿ ಸ್ಮರಿಸುವ ವರಶಿಖಾಮಣಿದ್ವಯ ॥ ೩ ॥

## ಕಂಡು ಧನ್ಯನಾದೆ ಗುರುಗಳ - ಮೋಹನ ವಿಠಲ

ರಾಗ : ಸುರುಟಿ ಆದಿತಾಳ

ಕಂಡು ಧನ್ಯನಾದೆ ಗುರುಗಳ । ಕಣ್ಣಾರೆ ನಾ ॥ ಪ ॥

ತುಂಗಾ ತಟದಿ ನಿಂತು ಪಂಗು ಬಧಿರಾದ್ಯಂಗ ಹೀನರ
ಅಂಗ ಗೈಸಿ ಪೊರೆವಾ ನರಸಿಂಗನಂಘ್ರಿ ಭಜಕರಿವರು ॥ ೧ ॥

ಗುರುವರ ಸುಗುಣೇಂದ್ರರಿಂದ । ಪರಿಪರಿಯಲಿ ಸೇವೆಗೊಳುತ ।

ವರ ಮಂತ್ರಾಲಯ ಪುರದಿ ಮೆರೆವ ಪರಿಮಳಾಖ್ಯ ಗ್ರಂಥ ಕರ್ತರ ॥ ೨ ॥

ಸೋಹಂ ಎನ್ನದೆ ಹರಿಯ ದಾಸೋಹಂ ಎನ್ನಲು ವಲಿದು ।
ವಿಜಯ ಮೋಹನ್ನವಿಠಲನ್ನ ಪರಮ ಸ್ನೇಹ ದಿಂದ ಭಜಿಸುವವರ ॥ ೩॥

## ನಾಮದ ಘನತೆ ಸಲ್ಲುವುದು ನಿಮಗೆ - ಗುರುಗೋಪಾಲ ವಿಠಲ

ರಾಗ : ಕಂಬೋಧಿ ಝಂಪೆತಾಳ

ನಾಮದ ಘನತೆ ಸಲ್ಲುವುದು ನಿಮಗೆ । ಶ್ರೀಮಂತ ಶ್ರೀರಘವೇಂದ್ರರೆಂತೆಂಬೊ ॥ ಪ ॥

ಅಲ್ಪಬೋಧರ ಭಾಷ್ಯಾಂಬುಧಿಗೆ ಟೀಕೆಗಳೆಂಬ । ಲಲಿತ ಸೇತುವೆ ಕಟ್ಟಿ ಹರಿದಾಸರ ।
ಸುಲಭದಿಂದೈದಿಸಿ ದಶಕರಣಗಳ ಜೈಸಿ । ವಲಿಸಿ ಸವಿದ ವಿಷ್ಣುಜ್ಞಾನ ಪ್ರಗತಿಯ ॥ ೧ ॥

ಹಲವು ದುರ್ಮತವಾದಿಗಳು ಎಂಬ ಆದ್ರಿಗಳ । ಕುಲಿಶದಂದದಿ ಭೇದಿಸಿ ಅಲವ ಬೋಧರ
ಮತದಿ ಅಮರಪುರತೆರದಿ ನಿ । ಶ್ಚಲ ಧರ್ಮಸಾಮ್ರಾಜ್ಯವನಾಳ್ದೆ ಕವಿಗಳ ಪೊರೆದೆ ॥ ೨ ॥

ಭಾಸುರಸಚ್ಛಾಸ್ತ್ರ ವದನದಿ ಒಪ್ಪ್ಪತಾಪೂಶರ ಜಯ ಶಕ್ತಿಯನೆ ಧರಿಸಿದೆ ।
ವಾಸವೀ ಸುತ ಗುರು ಗೋಪಾಲವಿಠಲನ್ನ । ದಾಸ ಮಂತ್ರಾಲಯದಿ ವಾಸ ಶ್ರೀರಾಘವೇಂದ್ರ ॥ ೩ ॥

## ರಾಘವೇಂದ್ರ ಗುರುಪಾವನ ಕಾಯಾ - ವಿಜಯ ವಿಠಲ

ರಾಗ : ಹಿಂದೋಳ ಝಂಪೆತಾಳ

ರಾಘವೇಂದ್ರ ಗುರುಪಾವನ ಕಾಯಾ ।
ರಾಘವೇಂದ್ರ ಮಂತ್ರಾಲಯ ನಿಲಯ ॥ ಪ ॥

ರಾಘವೇಂದ್ರ ದುರಿತೌಘ ಪರಿಹಾರ ।
ರಾಘವೇಶನ ಪಾದವನಜಾರಾಧಕ ॥ ೧ ॥

ಶರಣು ಹೊಕ್ಕೆನು ಇಂದು ಕರುಣ ಪೋಲುವ ಚರಣ ।
ಸ್ಮರಣೆ ಕರುಣಿಪುದು ಕರುಣದಿಂದ ಗುರು ॥ ೨ ॥

ಸಿರಿವರ ವಿಜಯವಿಠ್ಠಲ ಪರನೆಂದು ।
ಸ್ಥಿರವಾಗಿ ಸ್ಥಾಪಿಸಿ ಮೆರೆದ ನಿರ್ಮಲಕಾಯ ॥ ೩ ॥

## ಕರುಣೆಕಾಯೊ ರಾಘವೇಂದ್ರ ಗುರುವೆ - ಗುರುಗೋಪಾಲ ವಿಠಲ

ರಾಗ : ಭೀಮಪಲಾಸ್ ಝಂಪೆತಾಳ

ಕರುಣಿಕಾಯೊ ರಾಘವೇಂದ್ರ ಗುರುವೆ । ನೆರೆ ನಂಬಿದವರ ಕಾಮಿತ ಕಲ್ಪತರುವೇ ॥ ಪ ॥

ತೀರ್ಥಪಾದನ ಪಾದ ಪಂಕಜಭೃಂಗ । ದೂರ್ತವಾದಿಅಂಧ ತಿಮಿರಪತಂಗಾ ।
ಕಾರ್ತಸ್ವರಲೋಷ್ಟಸಮಚಿತ್ತಸಂಗಾ । ಆರ್ತಜನರಪಾಲ । ಅತಿದಯಾಪಾಂಗಾ ॥ ೧ ॥

ಚಪಲಚಿತ್ತರು ತಮ್ಮ ಜಪತಪದಿಂದು ವಿಪರೀತ ಕರ್ಮ ಫೋಗುವದು ಹೀಗೆಂದು ।
ಅಪಹಾಸವಲ್ಲವೇ ಇದು ಏನು ಥಂಧು । ಕೃಪಣವತ್ಸಲಕಾಯೊ ಅತಿದಯಾದಿಂದು ॥ ೨ ॥

ಫಲಬೇಡಿ ಸೇವೆ ಮಾಡುವ ದಾಶನಲ್ಲ । ಫಲಕೆ ಸೇವೆಯ ಸ್ವೀಕರಿಪ ಸ್ವಾಮಿ ನೀನಲ್ಲ ।
ಹಲವು ಮಾತೇನು ಈ ವಿವರವನ್ನೆಲ್ಲ ತಿಳಿದ ಸರ್ವಜ್ಞರಿಂ ಬಿನ್ನೈಸೊ ಸೊಲ್ಲ ॥ ೩ ॥

ಸೋತ್ತುಮರನಿಷ್ಟಪುಣ್ಯವು ನಿಜದಿ ಬಂದು । ಭೃತ್ಯರಾ ಸುಖಕೆ ಕಾರಣವಾಹುದೆಂದು ।
ಕ್ಲಿಪ್ತವಾಗಿದೆ ನಮಗೆ ವಲಿದು ಭಕುತಿಯನಿಂದು । ಇತ್ತು ಪಾಲಿಸಬೇಕೋ ದೀನಬಂಧೊ ॥ ೪ ॥

ಮರುದಂಶಮಧ್ವ ಮತಾಬ್ಧಿ ಚಂದಿರನೆ । ಪರಮ ಕಲ್ಯಾಣ । ಗುಣ ರತ್ನ ರತ್ನಾಕರನೆ ॥
ದುರಿತಜಿಮೂತಕೆ ಚಂಡಮಾರುತನೆ । ಸಿರಿಗುರು ಗೋಪಾಲ ವಿಠಲನ್ನ ಶರಣನೆ ॥ ೫ ॥

## ವಂದಿಸುವೆ ಗುರು ರಾಘವೇಂದ್ರಾರ್ಯರ - ಜಗನ್ನಾಥ ವಿಠಲ

ರಾಗ : ಮಾಲಕೌಂಸ (ಹಿಂದೋಲ) ಝಂಪೆತಾಳ

ವಂದಿಸುವೆ ಗುರು ರಾಘವೇಂದ್ರಾರ್ಯರ । ಬೃಂದಾವನ ಪ್ರತೀಕಕೆ ನಾ ॥ ಪ ॥

ಸುವಿರೋಧಿವತ್ಸರದಿ । ಶ್ರಾವಣ ಪರದ್ವಿತೀಯ ಕವಿವಾರ ತುಂಗಭದ್ರಾತೀರದಿ ॥
ನವಸುಮಂತ್ರಾಲಯದಿ ದೇಹವನು ಬಿಟ್ಟು ಮಾ । ಧವನಪುರಕೈದಿದ ಮಹಾತ್ಮರಿವರೆಂದು ॥ ೧ ॥

ಸ್ವಪದಾವಲಂಬಿಗಳಿಗುಪನಿಷತ್ ಖಂಡಾರ್ಥ । ಉಪದೇಶ ಗೈದು ಕಾಶ್ಯಪಿಸುತರನು ।
ಪ್ರಪುನೀತರನು ಮಾಡಿ । ಅಪವರ್ಗದವರೊಳಗೆ । ಉಪಮರಿಲ್ಲೆಂದರುಹಿ ದುಪಕಾರಿಗಳ ಕಂಡು ॥ ೨ ॥

ದೇವತೆಗಳಿವರಿದಕೆ  ಸಂದೇಹ ಬಡಸಲ್ಲ । ವೃಂದಾವನವ ರಚಿಸಿ ಪೂಜಿಪ ಭಕ್ತರ ।
ಸೇವೆಯಕೊಂಡು ಈವರು ಮನೋರಥವ । ಶ್ರೀವರಜಗನ್ನಾಥ ವಿಠಲಗತಿ ಪ್ರಿಯರೆಂದು ॥ ೩ ॥

## ಗುರು ರಾಘವೇಂದ್ರರ ಚರಣ - ಗೋಪಾಲವಿಠಲ

ರಾಗ : ಧನ್ಯಾಸಿ  ಅಟತಾಳ

ಗುರುರಾಘವೇಂದ್ರರ । ಚರಣಕಮಲವನ್ನು । ಸ್ಮರಿಸುವ ಮನುಜರಿಗೆ ॥ ಪ ॥

ಕರೆಕರೆಗೊಳಿಸುವ । ದುರಿತ ದುಷ್ಕೃತವೆಲ್ಲ ।
ಕರಿಯು ಸಿಂಹನ ಕಂಡ । ತೆರೆನಾಗುವಿದಯ್ಯ ॥ ಅ । ನು ॥

ಗುರುಮಧ್ವಮತವೆಂಬುವರ ಕ್ಷೀರಾಬ್ಧಿಯಲ್ಲಿ । ಹರಿ ಧರಿಸಿದ ಶಶಿಯಂತುದಿಸಿ ॥
ಪರಮತ ತಿಮಿರಕ್ಕೆ ತರಣಿ ಕಿರಣವೆನಿಸಿ । ಧುರಿದಿ ಮೆರೆದ ನರ । ಹರಿ ರಾಮಾರ್ಚಕರಾದ ॥ ೧ ॥

ಹರಿಯೆ ಸರ್ವೋತ್ತಮ । ಸಿರಿಯು ಆತನ ರಾಣಿ । ಪರಮೇಷ್ಠಿ ಮರುತರೆ ಗುರುಗಳೆಂದೂ ॥
ಗರುಡ ಶೇಷ ರುದ್ರ । ಸಮರೆಂದು ಸ್ಥಾಪಿಸಿ । ತರತಮ ಪಂಚಭೇದವೆ ಸತ್ಯವೆಂಬ ॥ ೨ ॥

ಅಂಧಕರಿಗೆ ಚಕ್ಷು । ವಂಧ್ಯೆಯರಿಗೆ ಸುತರು । ಬಂದಬಂದವರಿಗಭೀಷ್ಟವ ಕೊಡುತ ॥
ಒಂದಾರುನೂರು ವತ್ಸರ ಬೃಂದಾವನದಲ್ಲಿ । ಚಂದಾಗಿ ನಿಂದೂ ಮೆರೆವ ಕೃಪಾಸಿಂಧೂ ॥ ೩ ॥

'ರಾ' ಎನ್ನೆ ರಾಶಿ ದೋಷಗಳ ದಹಿಸುವ । 'ಘ' ಎನ್ನೆ ಘನ ಜ್ಞಾನ ಭಕುತಿ ಈವ ॥
'ವೇಂ' ಎನ್ನೆ ವೇಗದಿ ಜನನ ಮರಣ ದೂರ । 'ದ್ರ' ಎನ್ನೆ ದ್ರವಿಣಾರ್ಥ ಶ್ರುತಿಪಾದ್ಯನ ಕಾಂಬ ॥ ೪ ॥

ವರ ತುಂಗಾ ತೀರ ಮಂ । ತ್ರಾಲಯ ಪುರದಲ್ಲಿ । ಪರಿಪರಿ ಸೇವೆ ಭೂಸುರರಿಂದ ಕೊಳುತಾ ॥
ಸಿರಿರಮಣಾ ನಮ್ಮ ಗೋಪಾಲವಿಠಲನ್ನ ಚರಣ ಭಜಿಸುತ್ತಿಪ್ಪ ವರಶಿಖಾಮಣಿಯಾದ ॥ ೫ ॥
ಪಾಠಾಂತರ : (ದೇವಾಂಶರಾಗಿ ತುಂಗಾತೀರದಿ ನಿಂತು । ಸೇವೆ ಭೂಸುರರಿಂದ ಬಹುಕೊಳ್ಳುತ ॥
ಭಾವಜನಯ್ಯ ಶ್ರೀಗೋಪಾಲ ವಿಠ್ಠಲನ್ನ । ಸೇವಿಸುತಿಹ ಯತಿಕುಲಶಿಖಾಮಣಿಯದ ॥ ೩ ॥)

## ನೋಡೆಲೋ ಮನವೇ ಕೊಂಡಾಡು - ಶ್ರೀಶವಿಠಲ

ರಾಗ : ಮೋಹನ ಝಂಪೆತಾಳ

ನೋಡೆಲೋ ಮನವೇ ಕೊಂಡಾಡು ಗುರುಗಳ ಪಾದ । ಈಡಿಲ್ಲವೋ ಪುಣ್ಯಕೆ ॥ ಪ ॥
ನಾಡೊಳಗೆ ಗುರು ರಾಘವೇಂದ್ರರಾಯರ ಸೇವೆ ಮಾಡಿದವ ಪರಮ ಧನ್ಯ ಮಾನ್ಯ ॥ ಅ । ಪ ॥

ನಿಷ್ಠೆಯಿಂದಲಿ ಸ್ಮರಿಸೆ ಕಷ್ಟಗಳು ದೂರ ಮನೋಭೀಷ್ಟಗಳ ಪೂರೈಪರೋ ।
ಅಷ್ಟ ಸೌಭಾಗ್ಯವನೆ ಕೊಟ್ಟು ಸುಜನರಿಗೆ ಶ್ರೀವಿಷ್ಣುದಾಸ್ಯವ ತೋರ್ಪರೋ ॥
ದೃಷ್ಟಿಯಿಂದಲಿ ನೋಡಲನೇಕಜನ್ಮದ ಪಾಪಬಿಟ್ಟು ಪೋಪವೋ ಕ್ಷಣದಲಿ ।
ಎಷ್ಟು ಹೇಳಲಿ ಇವರ ನಿಷ್ಠೆ ಮಹಾತ್ಮೆಯನು ದುಷ್ಟರಿಗೆ ದೊರೆಯದಿವರಾ ಸೇವೆ ॥ ೧ ॥

ಹಲವು ಕ್ಷೇತ್ರಗಳ್ಯಾಕೆ ಹಲವು ತೀರ್ಥಗಳ್ಯಾಕೆ ಫಲ ಸುಲಭದಲ್ಲಿರಲು ।
ಬಲವು ಇದ್ದದರೊಳು ಪ್ರದಕ್ಷಿಣೆ ಸುಪದಜಲ ತಲೆಯಲ್ಲಿ ಧರಿಸಿ ನಿತ್ಯ ॥
ಮಲರಹಿತನು ಆಗಿ ದಂಡಪ್ರಣಾಮ ಮಾಡೆ ಒಲಿವರು ಕರುಣದಲಿ ಬೇಗ ।
ಜಲಜನಾಭನು ನಾಲ್ಕು ರೂಪದಿಂದವರಲ್ಲಿ । ಸಿಲುಕಿ ಪೂಜೆಯ ಕೊಂಬ ಸತತ ಮೋಕ್ಷದಾತಾ ॥ ೨ ॥

ಹರಿದಾಸರಿದ್ದ ಸ್ಥಳ ವರಕಾಶಿ ಮೊದಲಾದ ಕುರುಕ್ಷೇತ್ರಕಿಂತಧಿಕವೋ ।
ಸುರಋಷಿ ಮುನಿಗಳು ಇಲ್ಲಿಹರು ವೈಕುಂಠ ಸರಿಮಿಗಿಲು ಎಂದೆನಿಪುದೋ ॥

ಪರಮ ಸುಜ್ಞಾನಿಗಳಿಗೀ ಫಲವು ದೊರಕುವುದು ತರತಮದಿ ಇತರ ಜನಕೆ ।
ಗುರು ಶ್ರೀಶವಿಠ್ಠಲನು ಇವರ ರೂಪನಾಮದಲಿ । ಪರಿಪರಿಯ ವರವ ಗರೆವಾ ಪೊರೆವಾ ॥ ೩ ॥

## ರಥವಾನೇರಿದ ರಾಘವೇಂದ್ರ - ಗೋಪಾಲವಿಠಲ

ರಾಗ : ಮಧ್ಯಮಾವತಿ  ಆದಿತಾಳ

ರಥವಾನೇರಿದ ರಾಘವೇಂದ್ರ । ರಾಯ ಗುಣಸಾಂದ್ರ ॥ ಪ ॥
ಸತತ ಮಾರ್ಗದಲಿ ಸಂಸೇವಿಪರಿಗೆ ಅತಿ ।
ಹಿತದಿಂದಲಿ ಮನೋರಥವ ಕೊಡುವೆನೆಂದು ॥ ಅ । ಪ ॥

ಚತುರದಿಕ್ಕು ವಿದಿಕ್ಕುಗಳಲ್ಲಿ ಚರಿಪ ಜನರಲ್ಲಿ ।
ಮಿತಿಯಿಲ್ಲದೆ ಬಂದೋಲೈಸುತಲಿ । ವರವ । ಬೇಡುತಲಿ ।
ನುತಿಸುತ ಪರಿಪರಿನತರಾಗಿ ಹರಿಗೆ ಗತಿಪೇಳದಲೆ ಸರ್ವಥಾ ನಾ ಬಿಡೆನೆಂದು ॥ ೧ ॥

ಅತುಳ ಮಹಿಮನಾ ದಿನದಲ್ಲಿ ದಿತಿಜವಂಶದಲಿ ।
ಉತುಪತ್ತಿಯಾಗಿ ಉಚಿತದಲ್ಲಿ । ಉತ್ತಮ ಮತಿಯಲ್ಲಿ ॥
ಅತಿಶಯವಿರುತಿರೆ ಪಿತನ ಬಾಧೆಗಳು ಮನ್ಮಥಪಿತನೊಲಿಸಿದ । ಜಿತ ಕರುಣದಲಿ ॥ ೨ ॥

ಪ್ರಥಮ ಪ್ರಹ್ಲಾದ ವ್ಯಾಸ ಮುನಿಯೆ । ಯತಿ ರಾಘವೇಂದ್ರ ।
ಪತಿತರುದ್ಧರಿಪ ಪಾವನಕರಿಯೆ । ಕೈ ಮುಗಿವೆನು ಧೊರೆಯೆ ॥
ಕ್ಷಿತಿಯೊಳು ಗೋಪಾಲವಿಠಲನ ನೆನೆಯುತ ವರಮಂತ್ರಾಲಯದೊಳು ಶುಭವ ಕೊಡುವೆನೆಂದು ॥ ೩ ॥

## ಶರಣರ ಸುರಭೂಜ ಗುರುರಾಜ - ಕಮಲೇಶ ವಿಠಲ

ರಾಗ : ಬೇಹಾಗ್  ಆದಿತಾಳ

ಶರಣರ ಸುರಭೂಜ ಗುರುರಾಜ ॥ ಪ ॥
ವರಮಂತ್ರಾಲಯ ಪುರವರ ಮಂದಿರ । ಕೋಟಿ ತಿಮಿರ ಭಾಸ್ಕರ ಸಮತೇಜ ॥ ೧ ॥
ಕಾಮಿತಾರ್ಥಗಳ ಕಾಮಧೇನುವಿನ । ನೇಮಮೀರಿ ಕೊಡುವ ಮಹಾರಾಜ ॥ ೨ ॥
ಖೇಶಕೋಟಿ ಸಂಕಾಶನಾದ ಕಮಲೇಶ ವಿಠಲನ ದಾಸನೆ ಸಹಜಾ ॥ ೩ ॥

## ಕರುಣೆಗಳೊಳಗೆಣೆಗಾಣೆನೊ - ಜಗನ್ನಾಥವಿಠಲ

ರಾಗ : ಧನ್ಯಾಸಿ  ಅಟತಾಳ

ಕರುಣಿಗಳೊಳಗೆಣೆಗಾಣೆನೊ ನಿನಗೆ ಸ । ದ್ಗುರುವರ ರಾಘವೇಂದ್ರಾ ॥ ಪ ॥
ಚರಣ ಕಮಲಗಳ ಮರೆಹೊಕ್ಕ ಸುಜನರ । ಹರಕೆಯ ನಿರುತದೀವೆ ನೀ ಕಾವೆ ॥ ಅ । ಪ ॥

ರಾಘವೇಂದ್ರ ಗುರುವೇ ಗತಿಯೆಂದನುರಾಗದಿಂದಲಿ ಭಜಿಪಾ ॥
ಭಾಗವತರ ದುರಿತೌಘಗಳಳಿದು ಚೆ । ನ್ನಾಗಿ ಸಂತೈಸುವ ನೀ ಸನ್ಮೌನಿ ॥ ೧ ॥

ಸುಧೀಂದ್ರ ಯತಿಕರ ಪದುಮಸಂಭವ ಮಧು । ಪದ ಪದಾಂಭುಜ ಮಧುಪ ॥
ತ್ರಿದಶಭೂರುಹದಂತೆ ರುಧಜನರಿಚ್ಛಿತ । ವೊದಗಿ ಪಾಲಿಸಿ ಪೊರೆವೇ ಮದ್ಗುರುವೇ ॥ ೨ ॥

ಕುಧರದೇವನ ದಿವ್ಯರದನದಿ ಜನಿಸಿದ ನದಿಯ ತೀರದಿ ಶೋಭಿಪ ॥
ಸದಮಲ ಘನಮಂತ್ರ ಸದನನಿಲಯಜಿತ । ಮದನ ಶ್ರೀ ಜಗನ್ನಾಥ ವಿಠಲನ ದೂತ ॥ ೩ ॥

## ರಾಘವೇಂದ್ರ ಗುರುರಾಯರ ಸೇವಿಸಿರೋ - ಶ್ರೀದವಿಠ್ಠಲ

ರಾಗ : ಜಂಜೂಟಿ ಆದಿತಾಳ

ರಾಘವೇಂದ್ರ ಗುರುರಾಯರ ಸೇವಿಸಿರೋ । ಸೌಖ್ಯದಿ ಜೀವಿಸಿರೋ ॥ ಪ ॥
ತುಂಗಾತೀರದಿ ರಘುರಾಮನ ಪೂಜಿಪರೋ । ನರಸಿಂಗನ ಭಜಕರೋ ॥ ಅ । ಪ ॥

ಶ್ರೀಸುಧೀಂದ್ರ ಕರಸರೋಜ ಸಂಜಾತ । ಜಗದೊಳು ಪುನೀತ ।
ದಾಶರಥಿಯ ದಾಸತ್ವವ ತಾನ್ವಹಿಸಿ । ದುರ್ಮತಗಳ ಜಯಿಸಿ ॥
ಈ ಸಮೀರಮತ ಸಂಸ್ಥಾಪಕರಾಗಿ । ನಿಂದಕರನು ನೀಗಿ ।
ಭೂಸುರರಿಗೆ ಸಂಸೇವ್ಯ ಸದಾಚರಣೀ । ಕಂಗೊಳಿಸುವ ಕರುಣೀ ॥ ೧ ॥

ಕುಂದದೆ ವರಮಂತ್ರಾಲಯದಲ್ಲಿರುವ । ಕರೆದಲ್ಲಿಗೆ ಬರುವ ।
ಬೃಂದಾವನಗತ ಮೃತ್ತಿಕೆ ಜಲಪಾನ । ಮುಕ್ತಿಗೆ ಸೋಪಾನ ॥
ಸಂದರ್ಶನ ಮಾತ್ರದಲಿ ಮಹತ್ಪಾಪ । ಬಡಿದೋಡಿಸಲಾಪ ।
ಮಂದಭಾಗ್ಯರಿಗೆ ದೊರಕದಿರುವ ಸೇವಾ । ಶಾರಣರ ಸಂಜೀವಾ ॥ ೨ ॥

ಶ್ರೀದವಿಠ್ಠಲನ ಸನ್ನಿಧಾನಪಾತ್ರ । ಸಂಸ್ತುತಿಸುವ ಮಾತ್ರ ।
ಮೋದಪಡಿಸುತಿಹ ತಾನಿಹಪರದಲ್ಲಿ । ಈತಗೆ ಸರಿಯೆಲ್ಲಿ ॥
ಮೇದಿನಿಯೊಳಗಿನ್ನರಸಲು ನಾ ಕಾಣೆ । ಪುಸಿಯಲ್ಲೆನ್ನಾಣೆ ।
ಪಾದಸ್ಮರಣೆಯ ಮಾಡದವನೆ ಪಾಪಿ । ನಾ ಹೇಳುವೆ ಸ್ಥಾಪಿ ॥ ೩ ॥

## ಭೋ ಯತಿವರದೇಂದ್ರ - ಅನಂತಾದ್ರೀಶ

ರಾಗ : ಸುರಟಿ ಆದಿತಾಳ

ಭೋ ಯತಿವರದೇಂದ್ರ । ಶ್ರೀ ಗುರುರಾಯ ರಾಘವೇಂದ್ರ ॥ ಪ ॥
ಕಾಯೊ ಎನ್ನ ಶುಭಕಾಯ ಭಜಿಸುವೆನು । ಕಾಯೊ ತವಕ ಚಂದ್ರಾ ॥ ಅ । ಪ ॥

ನೇಮವು ಎನಗೆಲ್ಲಿ । ಇರುವುದು ಕಾಮಾಧಮನಲ್ಲಿ ॥
ಶ್ರೀಮಹಾಮಹಿಮನೆ ಪಾಮರ ನಾ ನಿಮ್ಮ ನಾಮವೊಂದನೇ ಬಲ್ಲೆ ॥ ೧ ॥

ಕಂಡ ಕಂಡ ಕಡೆಗೆ ತಿರುಗಿ ಬೆಂಡಾದೆನೋ ಕೊನೆಗೆ ॥
ಕಂಡ ಕಂಡವರ ಕೊಂಡಾಡುತ ನಿಮ್ಮ । ಕಂಡೆ ಕಟ್ಟ ಕಡೆಗೇ ॥ ೨ ॥

ಮಂತ್ರವ ನಾನರಿಯೇ ಶ್ರೀಮನ್ ಮಂತ್ರಾಲಯ ದೊರೆಯೆ ।
ಅಂತರಂಗದೊಳು ನಿಂತು ಪ್ರೇರಿಸೋ । ಅನಂತಾದ್ರೀಶ ದೊರೆಯೆ ॥ ೩ ॥

## ಪೊಂದಿ ಬದುಕಿರೊ - ಜಗನ್ನಾಥವಿಠಲ

ರಾಗ : ತೋಡಿ ರೂಪಕ

ಪೊಂದಿ ಬದುಕಿರೊ । ರಾಘವೇಂದ್ರರಾಯರ ॥ ಕುಂದದೆಮ್ಮನೂ ಕರುಣದಿಂದ ಪೊರೆವರಾ ॥ ಪ ॥

ನಂಬಿ ನುತಿಸುವ ಜನಕದಂಬ ಕಿಷ್ಟವ । ತುಂಬಿ ಕೊಡುವವನು । ಅನ್ಯರ್ಥಂಬಲೀಯನು ॥ ೧ ॥
ಅಲವಬೋಧರ ಸುಮತ ಜಲಧಿಚಂದಿರ । ಒಲಿದು ಭಕ್ತರಾ ಕಾಯ್ವ । ಸುಲಭ ಸುಂದರ ॥ ೨ ॥
ಗುರುಸುಧೀಂದ್ರರ । ವಿಮಲ ಕರಜರೆನಿಪರ । ಸ್ಮರಿಸಿ ಸುರುಚಿರ । ವಿಮಲ ಚರಣಪುಷ್ಕರ ॥ ೩ ॥
ಫಾಲಲೋಚನ ವಿನುತ ಮೂಲರಾಮನ । ಶೀಲ ಸದ್ಗುಣ ನುತಿಪ । ಮೇಲು ಭಕುತನಾ ॥ ೪ ॥
ಭೂತಭಾವನ । ಜಗನ್ನಾಥ ವಿಠಲನ ಪ್ರೀತಿಪಾತ್ರನಾ ನಂಬಿರೀತನನುದಿನ ॥ ೫ ॥

## ಕರೆದರೆ ಬರಬಾರದೆ - ಕಮಲೇಶವಿಠಲ

ರಾಗ : ಜೇಹಾಗ್ ಆದಿತಾಳ

ಕರೆದರೆ ಬರಬಾರದೆ ॥ ಪ ॥
ವರಮಂತ್ರಾಲಯ ಪುರಮಂದಿರವ ತವ । ಚರಣಸೇವಕರು ಕರಮುಗಿದು ॥ ೧ ॥
ಹರಿದಾಸರು ಸುಸ್ವರ ಸಮ್ಮೇಳದಿ । ಪರವಶದಲಿ ಬಾಯ್ದೆರೆದು ಕೂಗಿ ॥ ೨ ॥
ಪೂಶರಪಿತ ಕಮಲೇಶ ವಿಠ್ಠಲನ । ದಾಸಾಗ್ರೇಸರರೀ ಸಮಯದಿ ॥ ೩ ॥

## ರೋಗಹರನೆ ಕೃಪಾಸಾಗರ - ಜಗನ್ನಾಥ ವಿಠಲ

ರಾಗ : ದೇಶಿ ಅಟತಾಳ

ರೋಗಹರನೆ ಕೃಪಾಸಾಗರ ಶ್ರೀಗುರು । ರಾಘವೇಂದ್ರ ಪರಿಪಾಲಿಸೋ ॥ ಪ ॥

ಸಂತತ ದುರ್ಮತ ಧ್ವಾಂತ ದಿವಾಕರ । ಸಂತವಿನುತ ಮಾತ ಲಾಲಿಸೋ ॥ ೧ ॥
ಪಾವನಗಾತ್ರ ಸುದೇವವರನೆ ತವ । ಸೇವಕ ಜನರೊಳಗಾಡಿಸೋ ॥ ೨ ॥
ಘನ ಮಹಿಮ ಜಗನ್ನಾಥ ವಿಠ್ಠಲ ಪ್ರಿಯ । ನಿನ್ನಾರಾಧನೆ ಮಾಡಿಸೊ ॥ ೩ ॥

## ನಮೋ ನಮೋ ಶ್ರೀರಾಘವೇಂದ್ರ - ಜಗನ್ನಾಥ ವಿಠಲ

ರಾಗ : ಆರಭಿ ಝಂಪೆತಾಳ

ನಮೋ ನಮೋ ಶ್ರೀರಾಘವೇಂದ್ರ ಸದ್ಗುಣಸಾಂದ್ರ । ಕಮಲನಾಭನದಾಸ ಕಮಲಾಪ್ತಭಾಸ ॥ ಪ ॥

ದೇಶ ದೇಶಗಳಿಂದ ದೈನ್ಯದಿಂದಲಿ ಬಂದ । ಅಶೇಷ ಜನರುಗಳನ್ನ ಸಲಹುವ ವಿಶಿಷ್ಟ ॥
ನಾ ಸೇರಿದೆನೋ ನಿನ್ನ ನಮಿತ ಜನರ ಪ್ರಸನ್ನ । ಭಾಸುರ ಶುಭಚರಿತ ಭಜಿಸುವೆನು ಅನವರತ ॥
ನಮೋ ನಮೋ ॥ ೧ ॥

ಭೇದಾರ್ಥಜಲಜಾರ್ಕ ಭೂರಿ ಬಲತರ ತರ್ಕ । ವಾದಿ ವೃಕ್ಷಕೆ ಕುಲಿಶ ವರಹಸುತೇವಾಸ ॥
ಬಾಧಿಸುವ ಅಘಜೀರ್ಣ ಮಾಡು ಗುರುವರ ಪೂರ್ಣ । ಬೋಧಿಮತ ಸಂಭೂತ ಭೂರಿ ಪ್ರಖ್ಯಾತ ॥
ನಮೋ ನಮೋ ॥ ೨ ॥

ನತಜನಾಶ್ರಯಪ್ರೀಯ ನೆರೆನಂಬಿದೆನೋ ಮಾಯಾ । ಮತಕದಳಿ ಗಜೇಂದ್ರವಿಬುಧಾಬ್ಧಿ ಚಂದ್ರ ॥
ಕ್ರತುಭುಕ್ ಜಗನ್ನಾಥ ವಿಠಲನ ನಿಜದೂತ । ತುತಿಸಲಾಪೆನೆ ನಿನ್ನ ಯತಿಶಿರೋರನ್ನ ॥
ನಮೋ ನಮೋ ॥ ೩ ॥

## ಬೃಂದಾವನದಲಿ ರಾಜಿಪ ಯತಿವರನ್ಯಾರೆ - ಶ್ರೀಪತಿ ವಿಠಲ

ರಾಗ : ಮೋಹನ ರೂಪಕತಾಳ

ಬೃಂದಾವನದಲಿ ರಾಜಿಪ ಯತಿವರನ್ಯಾರೇ ಪೇಳಮ್ಮಯ್ಯ ॥ ಪ ॥
ಇಂದಿರೆಯರಸನ ಚೆಂದದಿ ಭಜಿಸುವ । ಕುಂದುರಹಿತ ರಾಘವೇಂದ್ರ ಕಾಣಮ್ಮಾ ॥ ಅ । ಪ ॥

ಮಂತ್ರಾಲಯ ಕೃತಮಂದಿರನೆನಿಸುವನ್ಯಾರೇ ಪೇಳಮ್ಮಯ್ಯ ।
ತಂತ್ರದೀಪಕ ಮುಖ್ಯ ಗ್ರಂಥಕರ್ತರೆನಿಸುವನ್ಯಾರೇ ಪೇಳಮ್ಮಯ್ಯ ॥
ಕಂತು ಪಿತನ ಸ್ವತಂತ್ರದಿ ಭಜಿಸುವನ್ಯಾರೇ ಪೇಳಮ್ಮಯ್ಯ ।
ಚಿಂತಿತ ಫಲದ ದುರಂತ ಶಕ್ತ ಜಯವಂತ ಈತ ಅಘಶಾಂಕ ಕಣಮ್ಮ ॥ ೧ ॥

ಶ್ರೀ ಸುಧೀಂದ್ರ ಕರಕಮಲಜರೆನಿಸುವನ್ಯಾರೇ ಪೇಳಮ್ಮಯ್ಯ ।
ತಾ ಸ್ವಪ್ನದಿ ಮಂತ್ರಾಕ್ಷತೆ ಕೊಡುತಿಹನ್ಯಾರೇ ಪೇಳಮ್ಮಯ್ಯ ॥
ಆಶುಗಮನ ಮತಸ್ಥಾಪಕನಿವನ್ಯಾರೇ ಪೇಳಮ್ಮಯ್ಯ ।
ಭೂಸುರಜ್ಞಾನಿ ವಿಶೇಷನೆನಿಸಿ ಹರಿದಾಸ್ಯವ ಪಡೆದ ಯತೀಶ ಕಣಮ್ಮ ॥ ೨ ॥

ಧಾರುಣಿಪತಿ ಜಲತೀರದಿ ನೆಲಸಿಹನ್ಯಾರೇ ಪೇಳಮ್ಮಯ್ಯ ।
ಕರುಣ್ಯಮಹಿಮ ಅಪಾರಮಹಿಮನಿವನ್ಯಾರೇ ಪೇಳಮ್ಮಯ್ಯ ॥
ಸೇರಿದ ಭಕುತರ ಬಾರಿ ಬಾರಿಗೆ ಪೊರೆವನ್ಯಾರೆ ಪೇಳಮ್ಮಯ್ಯ ।

ನಾರಯಣ ತಂದೆ ಶ್ರೀಪತಿ ವಿಠಲನ ಆರಾಧಿಸುವ ರಾಘವೇಂದ್ರ ಕಣಮ್ಮ ॥ ೩ ॥

## ತುಂಗಾತೀರದಿ ನಿಂತ ಸುಯತಿವರನ್ಯಾರೇ - ಅಭಿನವಜನಾರ್ದನ ವಿಠಲ

ರಾಗ : ಮೋಹನ ರೂಪಕತಾಳ

ತುಂಗಾತೀರದಿ ನಿಂತಸುಯತಿವರನ್ಯಾರೇ ಪೇಳಮ್ಮಯ್ಯ ॥ ಪ ॥
ಸಂಗೀತಪ್ರಿಯ ಮಂಗಳಸುಗುಣತ । ರಂಗ ಮುನಿಕುಲೋತ್ತುಂಗ ಕಣಮ್ಮ ॥ ಅ । ಪ ॥

ಚಲುವಫಣೆಯಲಿ ತಿಲಕನಾಮಗಳು ನೋಡಮ್ಮಯ್ಯ ।
ಸುಲಲಿತ ದಂಡಕಮಂಡಲ ಧರಿಸಿಹನ್ಯಾರೇ ನೋಡಮ್ಮಯ್ಯ ॥
ಜಲಜಮಣಿಗಳು ಕೊರಳಲಿ ತುಳಸಿ ಮಾಲೆಗಳು ನೋಡಮ್ಮಯ್ಯ ।
ಖೂಳ ಹಿರಣ್ಯಕನಲ್ಲಿ ಜನಿಸಿದ ಪ್ರಹ್ಲಾದನು ತಾನಿಲ್ಲಿಹನಮ್ಮ ॥ ೧ ॥

ಸುಂದರಚರಣಾರವಿಂದಕೆ ಸುಭಕುತಿಯ ಪೊಂದಿ ಪೇಳಮ್ಮಯ್ಯ ।
ವಂದಿಸಿಸ್ತುತಿಸಲು ಬಂದ ಭೂಮಿಸುರರಿಂದ ನೋಡಮ್ಮಯ್ಯ ॥
ಚಂದದಲಂಕೃತಿಯಿಂದ ಶೋಭಿಪಾನಂದ ನೋಡಮ್ಮಯ್ಯ ।
ಹಿಂದೆ ವ್ಯಾಸಮುನಿಯೆಂದೆನಿಸಿದ ಕರ್ಮಂದಿಗಳ ಸುರಯತೀಂದ್ರ ಕಣಮ್ಮ ॥ ೨ ॥

ಅಭಿನವಜನಾರ್ಧನ ವಿಠಲನ ಪದದ್ಯಾನಿಸುವರು ನೋಡಮ್ಮಯ್ಯ ।
ಅಭಿವಂತರಿಗೆ ಅಖಿಲಾರ್ಥಗಳ ಸಲ್ಲಿಸುವ ಕಾಣಮ್ಮಯ್ಯ ।
ನಭಮಣಿಯಂದದಿ ಬಹುವಿಧದಿಂದಲಿ ರಾಜಿಸುವನು ನೋಡಮ್ಮಯ್ಯ ।
ಶುಭಗುಣಗಣನಿಧಿ ರಾಘವೇಂದ್ರಗುರು ಅಬ್ಜಭವಾಂಡದಿ ಪ್ರಬಲ ಕಣಮ್ಮ ॥ ೩ ॥

## ನಿನ್ನ ನಂಬಿದೆ ರಾಘವೇಂದ್ರ - ಗುರುಜಗನ್ನಾಥ ವಿಠಲ

ರಾಗ : ಸಾವೇರಿ ಅಟತಾಳ

ನಿನ್ನ ನಂಬಿದೆ ರಾಘವೇಂದ್ರ । ನೀ । ಎನ್ನ ಪಾಲಿಸು ಸುಯಮೀಂದ್ರ ॥ ಪ ॥
ಸನ್ನುತಸನಕವೀಂದ್ರ ಪ್ರಸನ್ನ ಹೃತ್ಕುಮುದ ಸುಚಂದ್ರ ॥ ಅ । ಪ ॥

ಭಾರತೀಶ ಪದಾಬ್ಜಭೃಂಗ । ಖರಾರಿಯ ಕರುಣತರಂಗ ಸಾರಿದವರ ಭವಭಂಗ ।
ಸಮೀರಮತಾಂಬುಜಪತಂಗ ॥ ೧ ॥

ಭೇದ ಮತಾಬ್ಧಿ ವಿಹಾರ । ಕುವದಿ ಮದವನ ಕುಠಾರ ।
ಸಾಧಿತಸಕಲತತ್ವಸಾರ ಮಧುಸೂದನ ಚಂದ್ರಚಕೋರ ॥ ೨ ॥

ಸುಧೀಂದ್ರ ಕರಕಂಜಜಾತ । ವಿಬುಧ ಸಂಗ ಸತತ ಸಮೇಶ ।

ವಿಧಿಪಿತಗುರು ಜಗನ್ನಾಥ ವಿಠಲ । ನಧಿಕನೆಂದೊರೆದ ವಿಖ್ಯಾತ ॥ ೩ ॥

## ಸುರಪನಾಲಯದಂತೆ ಮಂತ್ರಾಲಯ - ಜಗನ್ನಾಥ ವಿಠಲ

ರಾಗ : ಕಾಂಬೋಧಿ ಝಂಪೆತಾಳ

ಸುರಪನಲಯದಂತೆ ಮಂತ್ರಾಲಯ । ಕರೆಸುವದು ಕಂಗೊಳಿಸುವದು ನೋಳ್ಪ ಜನಕೆ ॥ ಪ ॥

ಸುರತರುವಿನಂತಿಪ್ಪ ಕೀರ್ತಿಸಚ್ಛಾಯ ಆಶ್ರಿತರ ಮನೋರಥವ ಪೂರೈಸುವ ।
ಧರಣಿಸುರಖ್ಯ ಷಟ್ಪದಿಗಳಿಗೆ ವಿವಿತ್ಸುಧಾಪರಿಮಳವು ತೃಪ್ತಿಪಡಿಸಿದ ಮರುತನಂತೆ ॥ ೧ ॥

ಕಾಮಧೇನುವಿನಂತೆ ಇಪ್ಪ । ಗುರುಸಾರ್ವಭೌಮ ಸುಧೀಂದ್ರ ಸುತ ರಾಘವೇಂದ್ರ ॥
ಆ ಮಾಯಾವಾದಿ ಖಳ ತಾಮಿಶ್ರ ಓಡಿಸುವ ಚಿಂತಾಮಣಿಯಂತೆ ಹೊಳೆವ ವೃಂದಾವನ ॥ ೨ ॥

ವಾರಾಹಿ ಎಂಬ ನಂದನವನದಿ ವಿ । ಹಾರ ಮಾಳ್ಪರು ನತಜನಸ್ನಾನಪಾನ ।
ಶ್ರೀರಾಘವೇಂದ್ರರು ಇಲ್ಲಿಪ್ಪ ಕಾರಣ । ಪರಮಕಾರುಣ್ಯನಿಧಿ ಜಗನ್ನಾಥ ವಿಠಲನಿಹನು ॥ ೩ ॥

## ಬಾಗಿ ಭಜಿಸಿರೋ ರಾಘವೇಂದ್ರ ಯತಿಯಾ - ಅಭಿನವಜನಾರ್ದನವಿಠಲ

ರಾಗ : ಯದುಕುಲ ಕಾಂಬೋಧಿ ಆದಿತಾಳ

ಬಾಗಿ ಭಜಿಸಿರೋ ರಾಘವೇಂದ್ರ ಯತಿಯಾ । ಕೊಡುವರು ಸದ್ಗತಿಯಾ ॥ ಪ ॥
ಯೋಗಿಕುಲವರ್ಯ ಭಾಗವತರ ಪ್ರಿಯಾ ಸತ್ಕವಿಕುಲಗೇಯಾ ॥ ಅ । ಪ ॥

ಯತಿಸುಧೀಂದ್ರ ಗುರುಸುತಾದ್ಭುತಚರ್ಯ । ಪುಸಿಯಲ್ಲಿವು ಖರಿಯಾ ।
ಶ್ರೀತಜನತತಿ ಕಾಮಿತತರು ಸುರಧೇನು ಚಿಂತಾಮಣಿ ತಾನು ॥
ಶತಪರ್ವತವತ್ಸರವೃಂದಾವನದಿ । ನಲಿನಲಿವರು ಮುದದಿ ಚತುರವಿಧಿಸು
ಪುರುಷಾರ್ಥಗಳನೆ ಕೊಡುವಾ । ನಂಬಿದರಘತರಿವಾ ॥ ೧ ॥

ವರಮಂತ್ರಾಲಯ ಸುರುಚಿರಗೃಹದಲ್ಲಿ । ವರಹಜಾತೀರದಲಿ ಮೆರೆವ ಮಂಥರನ
ಬರಿದೆ ಪಾಪವ ಕಳೆವ ಮನದಲಿ ತಾ ಪೋಳೆವ ॥
ಸರ್ವಜ್ಞರು ಮೊದಲಾದ ಮುನಿಗಳಲ್ಲಿ । ಇಪ್ಪರು ಮುದದಲ್ಲಿ ।
ದುರಭಿಮಾನದಲಿ ಬಾರದವನೆ ಕೆಟ್ಟ । ಬರಲೀವ ಸುಶ್ರೇಷ್ಠ ॥ ೨ ॥

ಮಧ್ವಮುನಿಸುಮತಾಬ್ಧಿಪೂರ್ಣಚಂದ್ರ । ಸದ್ಗುಣಸಾಂದ್ರ ಸದ್ವೈಷ್ಣವಗುರು
ಕುಮತಾದ್ರಿಗೆ ಕುಲಿಶಾS ಕಾಷಾಯವಸನ ಸಿದ್ಧಾಂತ
ಸುಧೆಗೆ ಪರಿಮಳ ಸದ್ವ್ಯಾಖ್ಯಾನಗ್ರಂಥ । ಮಾಡಿದ ಮತಿವಂತ ।

ಮುದ್ದು ಅಭಿನವಜನಾರ್ದನ ವಿಠಲನ । ಸದ್ಭಕ್ತವರೇಣ್ಯ ॥ ೩ ॥

## ಬಂದದ್ದೆಲ್ಲ ಬರಲಿ ರಾಘವೇಂದ್ರರ ದಯವೊಂದಿರಲಿ - ಅಭಿನವಜನಾರ್ದನವಿಠಲ

ರಾಗ : ಸುರಟಿ ಆದಿತಾಳ

ಬಂದದ್ದೆಲ್ಲ ಬರಲಿ । ರಾಘವೇಂದ್ರರ ದಯವೊಂದಿರಲಿ ॥ ಪ ॥
ಹಿಂದೆ ಬಹು ಜನುಮದಿಂದ ಮಾಡಿದಘ । ಸಂದಣಿ ಕಳೆವುದೊಂದಿರದೇನೈ ॥ ಅ । ಪ ॥

ದಾಶರಥಿ ವೇದವ್ಯಾಸ । ನರ । ಕೇಸರಿ ಶ್ರೀಯಾದವೇಶ ॥
ಈ ಸುಮೂರ್ತಿಗಳುಪಾಸ– । ನೆಯ ಲೇ–। ಸಾಗಿ ಮಳ್ಪ ವಿಶೇಷ ॥
ದಾಸಜನರ ಅಭಿಲಾಷೆ ಪೂರಿಸುವ । ಶ್ರೀ ಸುಧೀಂದ್ರಜ ಯತೀಶನ ದಯವಿರೆ ॥ ೧ ॥

ಧರೆ ತಾವ್ ಕಳಕೊಂಡವರು । ಉಡಲರುವೆ ಇಲ್ಲದವರು ।
ತರಳ ಸಂಪದ ರಹಿತರು । ಮಹ । ದುರುತರಜ್ಞಾನಿ ಭಕುತರು ॥
ತೆರಳಿ ಬಂದು ಸಂದರಶನ ಮಾಡಲು ಕರದೀಪ್ಸಿತವ ಕೊಡುವರ ದಯವಿರುತಿರೆ ॥ ೨ ॥

ವಾತಪಿತ್ಥ ಕಫಶೀತ । ಸನ್ನಿಪಾತಕ ಜ್ವರಪ್ರಖ್ಯಾತ ।
ಭೂತಪ್ರೇತಭಯವ್ರಾತ ಕಳೆ । ವಾತುರರಿಗೆ ಫಲದಾತ ॥
ನಾಥ ಆಭಿನವ ಜನಾರ್ದನ ವಿಠಲನ । ಪ್ರೀತಿ ದೂತನ ದಯ ಅತಿಶಯವಾಗಿರೆ ॥ ೩ ॥

## ರಾಘವೇಂದ್ರ ತೀರ್ಥನೀತ - ಮಧ್ವೇಶವಿಠಲ

ರಾಗ : ಜಂಜೂಟಿ ರೂಪಕತಾಳ

ರಾಘವೇಂದ್ರ ತೀರ್ಥನೀತ । ರಾಜಿಸುವಾತಾ ॥ ಪ ॥
ಪಾಪೌಘಗಳೆಲ್ಲವನೋಡಿಸಿ ಪುಣ್ಯಗಳೀವಾತಾ ॥ ಅ । ಪ ॥

ಬಣ್ಣ ಬಣ್ಣದಿಂದ ಬಹಳ ಬೋಧಿಸುವಾತಾ । ಬಹಳ ಸಣ್ಣ ದೊಡ್ಡಭೀಷ್ಟಗಳ ಸಾಧಿಸುವಾತಾ ॥
ಪುಣ್ಯವಂತರಿಂದ ಬಹು ಪೂಜೆಗೊಂಬಾತಾ ನಮಗೆ । ಕಣ್ಣ ಹಬ್ಬವಾಗುವಂತೆ ಕಾಣಿಸುವಾತಾ ॥ ೧ ॥

ಕಾಮಕ್ರೋಧಾದಿಗಳನೆ ಕಾಲಿಲೊದ್ದಾತಾ । ಈತ । ವ್ಯೋಮಕೇಶನಂತೆ ನಾಲ್ಕು ವೇದ ಪ್ರಖ್ಯಾತಾ ॥
ಭೂಮಿಯೋಳ್ ದುರ್ವಾದಿಗಳನೆ ಭೂರಿ ಗೆದ್ದಾತ । ಪ್ರೌಢ । ಶ್ರೀಮಧ್ವಭೋಗೀಂದ್ರತೀರ್ಥ
ಶಿಷ್ಯನೆಂಬಾತಾ ॥ ೨ ॥

ಸಿದ್ಧವಿದ್ಯೆಗಳಲಿ ಬಹು ಪ್ರಸಿದ್ಧನಾದಾತಾ । ನಮ್ಮ ಮಧ್ವಶಾಸ್ತ್ರಾರ್ಥಗಳನೆ ಮಾಡಿಕೊಟ್ಟಾತಾ ॥
ಮಧ್ವೇಶವಿಠಲನ ಧ್ಯಾನದಲಿದ್ದಾತಾ । ತುಂಗ । ಭದ್ರತೀರದಲ್ಲಿ ತಾನು ವಾಸವಾದಾತಾ ॥ ೩ ॥

## ರಾಘವೇಂದ್ರ ಯತಿಸಾರ್ವಭೌಮ - ಜಗನ್ನಾಥವಿಠಲ

ರಾಗ : ನಾಟಿ ತ್ರಿಪುಟತಾಳ

ರಾಘವೇಂದ್ರ ಯತಿಸಾರ್ವಭೌಮ ದುರಿತೌಘದೂರ ತೇ ನಮೋ ನಮೋ ॥
ಮಾಗಧರಿಪು ಮತಸಾಗರಮೀನ ಮಹಾಘವಿನಾಶನ ನಮೋ ನಮೋ ॥
ಶ್ಲಾಘಿತ ಗುಣಗಣ ಸೂರಿಪ್ರಸನ್ನ ಸದಾಗಮಜ್ಞ ತೇ ನಮೋ ನಮೋ ॥
ಮೇಘಶ್ಯಾಮಲ ವರ್ಣನನಾಮಾ । ಮೋಘಬೋಧ ತೇ ನಮೋ ನಮೋ ॥ ೧ ॥

ತುಂಗಭದ್ರಸುತರಂಗಿಣಿ ತೀರಗ । ಮಂಗಳಚರಿತ ಶುಭಾಂಗ ನಮೋ ॥
ಗಾಂಗೇಯ ಸಮಭಂಗ ಕುಮುದ ಮಾ । ತಂಗಸಂಗ ಸಿತಪಾಂಗ ನಮೋ ॥
ಇಂಗಿತಜ್ಞ ಕಾಳಿಂಗ ಮಥನ ಯದುಪುಂಗವ ಹೃದಯ ಸುಸಂಗ ನಮೋ ॥
ಸಂಗಿರನಚಿನ್ಹಿತ ಶೃಂಗಾರಾನನ ತಿಂಗಳ ಕರುಣಾಂಗ ನಮೋ ॥ ೨ ॥

ಕೋವಿದಮಸ್ತಕ ಶೋಭಿತ ಮಣಿಸಂ- । ಭಾವಿತ ಮಹಿಮಾ ಪಾಲಯ ಮಾಂ ।
ಸೇವಾಪರ ಸರ್ವಾರ್ಥಪ್ರದ ವರಬೃಂ - । ದಾವನಮಂದಿರ ಪಾಲಯ ಮಾಂ ॥
ಭಾವಜಮಾರ್ಗಣಭುಜಗ ವಿನಾಯಕ । ಭಾವಜ್ಞಪ್ರಿಯ ಪಾಲಯ ಮಾಂ ।
ಕೇವಲ ನತಜನಪಾವನರೂಪ ಸದಾ । ವಿನೋದಿ ಹೇ ಪಾಲಯ ಮಾಂ ॥ ೩ ॥

ಶ್ರೀಸುಧೀಂದ್ರ ಕರಜಾತ ನಮೋ ನಮೋ । ಭೂಸುರನುತ ವಿಖ್ಯಾತ ನಮೋ ॥
ದೈಶೀಕರ ಸಂಸೇವ್ಯ ನಮೋ ನಮೋ । ನಮೋ ದೋಷವಿವರ್ಜಿತ ಕಾವ್ಯ ನಮೋ ॥
ಕ್ಲೇಶಿತಜನ ಪರಿಪಾಲ ನಮೋ ನಮೋ । ಭಾಸಿತಕರುಣಾಶೀಲ ನಮೋ ॥
ವ್ಯಾಸರಾಮ ಪದಭಕ್ತ ನಮೋ ನಮೋ । ಶಾಶ್ವತ ಧರ್ಮಾಸಕ್ತ ನಮೋ ॥ ೪ ॥

ಸನ್ನುತಮಹಿಮ ಜಗನ್ನಾಥವಿಠಲ ಸನ್ನಿಹಿತ ಮಾನ್ವಿತ ಜಯ ಜಯ ಭೋ ॥
ಚಿನ್ಹಿತದಂಡಕಮಂಡಲಪುಂಡ್ರ ಪ್ರಪನ್ನ ಭಯಾಪಹ ಜಯ ಜಯ ಭೋ ॥
ಮಾನ್ಯಮಹಾತ್ಮ ಪ್ರಸನ್ನ ವರದ ಕಾ- । ರುಣ್ಯಪಯೋನಿಧಿ ಜಯ ಜಯ ಭೋ ॥
ಧನ್ಯ ಕ್ಷಮಾಸಂಪನ್ನ ಧಾರಾಮರ । ಶರಣ್ಯ ಸದಾರ್ಚಿತ ಜಯ ಜಯ ಭೋ ॥ ೫ ॥

## ರಾಯ ಬಾರೋ ತಂದೆ ತಾಯಿ ಬಾರೋ - ಜಗನ್ನಾಥ ವಿಠಲ

ರಾಗ : ಅಭೇರಿ ಆದಿತಾಳ

ರಾಯ ಬಾರೋ ತಂದೆ ತಾಯಿ ಬಾರೋ । ನಮ್ಮನು ಕಾಯಿ ಬಾರೋ ।
ಮಾಯಿಗಳ ಮರ್ದಿಸಿದ ರಾಘವೇಂದ್ರಾ । ರಾಯ ಬಾರೋ ॥ ಪ ॥

ವಂದಿಪ ಜನರಿಗೆ ಮಂದಾರ ತರುವಂತೆ । ಕುಂದದಭೀಷ್ಟವ ಸಲಿಸುತಿರ್ಪೆ ।
ರಾಯ ಬಾರೋ ।
ಕುಂದದ ಭೀಷ್ಟವ ಸಲಿಸುತಿರ್ಪೆ ಸರ್ವಜ್ಞ । ಮಂದನ ಮತಿಗೆ ರಾಘವೇಂದ್ರ ।
ರಾಯ ಬಾರೋ ॥ ೧ ॥

ಆರ್‍ಮೂರು ಏಳು ನಾಲ್ಕು ಎಂಟು ಗ್ರಂಥ ಸಾರಾರ್ಥ । ತೋರಿದಿ ಸರ್ವರಿಗೆ ನ್ಯಾಯದಿಂದ ।
ರಾಯ ಬಾರೋ ।
ತೋರಿದಿ ಸರ್ವರಿಗೆ ನ್ಯಾಯದಿಂದ ಸರ್ವಜ್ಞ । ಸೂರಿಗಳರಸನೆ ರಾಘವೇಂದ್ರ ।
ರಾಯ ಬಾರೋ ॥ ೨ ॥

ರಾಮಪದಾಬ್ಜ ಸತತಭೃಂಗ ಕೃಪಾಂಗ । ಭ್ರಾಮಕ ಜನರ ಮಾನಭಂಗಾ ।
ರಾಯ ಬಾರೋ ।
ಭ್ರಾಮಕಜನರ ಮಾನಭಂಗಾ ಮಾಡಿದ । ಧೀಮಂತರೊಡೆಯನೆ ರಾಘವೇಂದ್ರಾ ।
ರಾಯ ಬಾರೋ॥ ೩ ॥

ಭಾಸುರಚರಿತನೆ ಭೂಸುರವಂದ್ಯನೆ ಶ್ರೀ ಸುಧೀಂದ್ರಾರ್ಯರ ವರಪುತ್ರಾ ।
ರಾಯ ಬಾರೋ ।
ಶ್ರೀ ಸುಧೀಂದ್ರಾರ್ಯರ ವರಪುತ್ರನೆನಿಸಿದೆ । ದೈಶಿಕರೋಡೆಯ ರಾಘವೇಂದ್ರ ।
ರಾಯ ಬಾರೋ ॥ ೪ ॥

ಭೂತಳನಾಥನ ಭೀತಿಯ ಬಿಡಿಸಿದೆ ಪ್ರೇತತ್ವ ಕಳೆದ ಮಹಿಷೀಯಾ ।
ರಾಯ ಬಾರೋ ।
ಪ್ರೇತತ್ವ ಕಳೆದ ಮಹಿಷೀಯಾ ಮಹಾಮಹಿಮ । ಜಗನ್ನಾಥ ವಿಠಲನ ಪ್ರೀತಿಪಾತ್ರಾ ।
ರಾಯ ಬಾರೋ ॥ ೫ ॥

## ನಮಿಸಿ ಬೇಡುವೆ ವರಗಳ ನಿನ್ನಾ - ಗುರುಜಗನ್ನಾಥವಿಠಲ

ರಾಗ : ಶ್ರೀರಾಗ ಅಟತಾಳ

ನಮಿಸಿ ಬೇಡುವೆ ವರಗಳ ನಿನ್ನಾ ಸಂ– । ಯಮಿ ಕುಲೋತ್ತಮ ರಾಘವೇಂದ್ರರನ್ನ ॥ ಪ ॥
ವಿಮಲ ಸುಮತಿ ಜನರತಿ ಪ್ರಿಯಾ । ಪಾದ । ಕಮಲ ಸುಮತಿ । ಜನರ ಪ್ರಿಯಾ ॥
ಶಮಲವರ್ಗದಲಿ ನೀನೀಯ– । ದಿರೋಮತಿಯ । ಅಮಿತ ಕರುಣದಿ ಪಿಡಿಯೋ ಕೈಯ್ಯ ॥ ೧ ॥

ಕಂಡ ಕಂಡವರನು ಬೀಡಿ । ನೊಂದೆ । ಕಮಂಡಲು ದಂಡಧಾರಿ ನೀ ಗತಿಯೆಂದೆ ॥
ಪಂಡಿತಾಗ್ರಗಣ್ಯ । ಇನ್ಯಾರು ಮುಂದೇ । ಕೋದಂಡಪಾಣಿಯ ಪಾದ ತೋರಿಸು ತಂದೆ ॥ ೨ ॥

ಶ್ರೀಸುಧೀಂದ್ರ ಯತಿಕರ ಕಂಜಜಾತ । ತುಂಗಾಸುನದಿ ನಿಲಯಾಗಂಬುಧಿಪೋತ ।
ವಾಸುಕಿಶಯನ ಗುರುಜಗನ್ನಾಥ । ವಿಠಲದಾಸರ ಪೋಷಕಲಾಲಿಸೀ ಪೋತಾ ॥ ೩ ॥

## ಶ್ರೀರಾಘವೇಂದ್ರ ನಿಮ್ಮ ಚಾರುಚರಣವ - ಜಗನ್ನಾಥ ವಿಠಲ

ರಾಗ : ನವರೋಜು ಛಾಪುತಾಳ

ಶ್ರೀರಾಘವೇಂದ್ರ ನಿಮ್ಮ ಚಾರುಚರಣವ ಸಾರಿದೆ । ಶರಣಮಂದಾರ ಕರುಣವ ॥ ಪ ॥
ಘೋರಭವವನಧಿ ತಾರಿಸು ತವಕದಿ ಸೂರಿ ಸುಧೀಂದ್ರಕುಮಾರ ಉದಾರ ॥ ಅ । ಪ ॥

ಮುನಿರಾಯ ನಿಮ್ಮ ಪಾದ । ವನರುಹಧ್ಯಾನ ಪ್ರಣವ ಸುಸ್ತವನಾರ್ಚನೆಮಾಳ್ಪ ನಾನಾ ।
ಜನರ ವಾಂಛಿತವೀವ ಗುಣ ಪೂರ್ಣಜ್ಞಾನ । ಧನವ ಪಾಲಿಸೆನಗೀಕ್ಷಣ ನಿನ್ನಾಧೀನ ।
ಮನುಜನ ಪ್ರತಿ ದಿನ ದಣಿದಣಿಸುವದು । ಘನವೇ ಗುರುವೆ ಪಾವನತರಚರಿತ ॥ ೧ ॥

ಮೂಲ ರಾಮನ ಪಾದ ಕೀಲಾಲಜ ಮಧುಪ । ಬಾಲನ ಬಿನ್ನಪ । ಲಾಲಿಸೋ ಮುನಿಪ ।
ತಾಳಲಾರೆನೊ । ತಾಪತ್ರಯದ ಸಂತಾಪ ಕೀಳೋ ವಿಮಲಜ್ಞಾನ ಶೀಲಸ್ವರೂಪ ॥
ಭೂಲಲನಾಪತಿ ಕೋಲನಂದಿನೀ ಕೂಲಗ ವರಮಂತ್ರಾಲಯ ನಿಲಯ ॥ ೨ ॥

ಕಲಿಕಲ್ಮಷ ವಿದೂರ ಕುಜನಕುಠಾರ । ನಳಿನಾಕ್ಷ ವಿಮಲ ಶ್ರೀತುಳಸೀಯ ಹಾರ ।
ಗಳಸುಶೋಭಿತ ಕಮಂಡಲು ದಂಡಧರ । ಅಲವ ಬೋಧರ ಮತಜಲಧಿವಿಹಾರ ।
ಸುಲಲಿತ ಕರುಣಾಂಬುಧಿ ಜಗನ್ನಾಥವಿಠಲನ । ಒಲಿಮೆಯ ಪಡೆದು ಇಳೆಯೊಳು ಮೆರೆವೇ ॥ ೩ ॥

## ರಾಘವೇಂದ್ರ ರಾಜಿತಗುಣಸಾಂದ್ರ - ಜಗನ್ನಾಥವಿಠಲ

ರಾಗ : ಧನ್ಯಾಸಿ ಆದಿತಾಳ

ರಾಘವೇಂದ್ರ । ರಾಜಿತಗುಣಸಾಂದ್ರ ॥ ಪ ॥
ರಾಘವೇಂದ್ರ ಗುರುರಾಯ ಘೋರ ಪಾ । ಪೌಘಗಳೆಣಿಸದಲೆ ಪಾಲಿಸು ಬಿಡದೆ ॥ ಅ । ಪ ॥

ಪ್ರಕಟಿಸಿ ತೋರಿದಿ ಮುಕುತಿಯು ಬೇಡಿದ । ಭಕುತನಯೋಗ್ಯತೆ ನಿಖಿಳ ಜನರಿಗೆ ॥ ೧ ॥
ಭೃತ್ಯಗೆ ಬಂದಪಮೃತ್ಯು ಕಳೆದ ಸುಖ । ವಿತ್ತು ಪೊರೆದ್ಯೊ ಪುರುಷೋತ್ತಮ ದಾಸ ॥ ೨ ॥
ಹುತವಹಗುಣಿಸಿದ ರತುನ ಮಾಲಿಕೆಯ । ಕ್ಷಿತಿಪಗೆ ತಂದಿತ್ತುತುಳಮಹಿಮನೆ ॥ ೩ ॥
ಕನಲಿದ ಜನಪನ ಅನುನಯನದಲಿ ನಿ । ನ್ನಣುಗನ ಮಾಡಿದಿ ಘನತರ ಚರಿತ ॥ ೪ ॥
ಚೂತಫಲರಸದಿ ಪೋತ ಮುಳುಗೆ ಮೃತ್ಯು । ಭೀತಿ ಬಿಡಿಸಿದ ಅನಾಥರಕ್ಷಕ ॥ ೫ ॥
ಕ್ಷಿಪ್ರದಿ ತೋರಿದಿ ವಿಪ್ರರ ಮಹಿಮೆಯ । ಆ ಪೃಥಿವೀಶಗೆ ಅಪ್ರತಿ ಗುರುವೇ ॥ ೬ ॥
ಪತಿತನ ನಿಜಯೋಗ್ಯತೆಯನ್ನರಿತು ಸ-। ದ್ಗತಿಯ ಪಾಲಿಸಿದೆ ಯತಿಕುಲವರ್ಯ ॥ ೭ ॥
ಮಳಲ ಮಾರ್ಗದೊಳು ಲಲನೆ ಪ್ರಸೂತಿಸೆ । ಪುಲಿನದಿ ಕಮಂಡಲ ಜಲವನು ತೋರಿದೆ ॥ ೮ ॥
ಬಿಸಲಿಂದಳುವಾ ಶಿಶುವಿಗೆ ಚೈಲಾ । ಗಸದಲಿ ನಿಲಿಸಿದ್ಯೋ ಅಸಮಮಹಿಮನೇ ॥ ೯ ॥
ದ್ವಾದಶವರ್ಷಾನ್ನೋದಕ ಸಲಿಸಿದೆ । ಮೇದಿನೀಪತಿಗೆ ಮಹಾದಯವಂತ ॥ ೧೦ ॥
ಸಾದರದಲಿ ಹಸ್ತೋದಕ ಕೊಡಲು ನಿ । ಷೇಧಗೈಯದೆ ನಿವೇದಿಪೆ ಹರಿಗೆ ॥ ೧೧ ॥
ಪಾದೋದಕವ ದಿನೇ ದಿನೇ ಸೇವಿಪ । ಸಾಧುಗಳಾದಿವ್ಯಾಧಿಗಳಳಿವೇ ॥ ೧೨ ॥
ಯತಿವರ ದೂರದಿ ಮೃತಗೈಯ್ಯಲಾಗಸ । ಪಥದಲಿ ಕಂಡು ನುತಿಸಿದ ಮಹಿಮೆ ॥ ೧೩ ॥

ವಿಪಿನದಿ ಚಂಡಾತಪದಿ ಬೆಂದ ಕಾ – । ಶ್ಯಪಿ ಸುರನುಳುಹಿದ ಕೃಪಣಜನಾಪ್ತಾ ॥ ೧೪ ॥
ಅನಿವೇದಿತ ಭೋಜನ ವಸ್ತುಗಳಿಂ । ದನುಭವ ಮಾಡಿಸಿದನುಪಮ ಚರಿತ ॥ ೧೫ ॥
ಭಾಷಾತ್ರಯ ಯುತ ವ್ಯಾಸೋಕ್ತಿಗಳ । ಪ್ರಕಾಶವ ಗೈಸಿದ ಭೂಸುರವಿನುತ ॥ ೧೬ ॥
ದಾತ ಸಿರಿ ಜಗನ್ನಾಥವಿಠಲನ । ದೂತನೆ ಮಂತ್ರನಿಕೇತನಿಲಯ ॥ ೧೭ ॥

## ವೃಂದಾವನವ ನೋಡಿದೇ ರಾಘವೇಂದ್ರ - ಶ್ರೀವೆಂಕಟೇಶವಿಠಲ

ರಾಗ : ನವರೋಜು ಅಟತಾಳ

ವೃಂದಾವನವ ನೋಡಿದೇ ರಾಘವೇಂದ್ರ ಗುರುಗಳ ನಾ ಕೊಂಡಾಡಿದೆ ॥ ಪ ॥
ನಿಂತು ವಂದನೆ ಮಾಡಿದೆ ವರಗಳೆಲ್ಲವ ಬೇಡಿದೆ ।
ಬಂದಿತು ಶ್ರಾವಣ ಬಹುಳ ಪಾಡ್ಯ ಬಿದಿಗೆ ತದಿಗೆಯಲ್ಲಿ ।
ಚಂದವುಳ್ಳ ತುಂಗಾತೀರ ಚಲುವ ಮಂತ್ರಾಲಯದಿ ॥ ಪ ॥

ಪಚ್ಚೆ ನೀಲದಂತೆ ಹೊಳೆವೊ ವೃಂದಾವನ । ಪರಿಪರಿ ದ್ವಾದಶನಾಮಗಳು ಹಚ್ಚಿದ ಶ್ರೀ ।
ಮುದ್ರಿ ಗಂಧ ಅಕ್ಷತೆಗಳು ಹೊಳೆವೊ । ಗೀರು ಅಂಗಾರಗಳು ಕುಚ್ಚುಸೆರಗುಶಾಠಿ ।
ದಂಡಕಮಂಡಲ ಕಾಂತಿಯುಳ್ಳ । ಉಪಕಾರಿಣಿಯು ಹಚ್ಚಿನ ಹೇಮಬಳ್ಳಿ ಆ– ।
ಭರಣಗಳು ಹಾರ ತುಳಸೀವನ । ಮಾಲೆಗಳು ಮೃತ್ತಿಕೆ ಅಂಗಾರ ಮಂತ್ರ ।
ಮಾಲಿಕೆ ಪಾದೋದಕದಿಂದ । ಒತ್ತಿದ ಗ್ರಹಗಳೆಲ್ಲ ಸುತ್ತುಗಟ್ಟಿ ಓಡುವುವು ॥ ೧ ॥

ಸುತ್ತುಗಚ್ಚಿನ ಗೋಡೆ ಸಾಲುನಂದಾದೀಪ । ಸಕಲಕಾಲದಲ್ಲಿ ಆರಾಧನೆಯು
ಕುಷ್ಟರೋಗದವರು ಕುರುಡ । ಕಿವುಡರಿಗೆ ಸ್ವಪ್ನಗಳಾಗೋದು । ಅತಿಶಯವು ಒತ್ತಿ ಓದುವ ವೇದ
ಒಡಲು । ಜಾಂಗಸಗಳು ಒಂಭತ್ತು ಜೋಡಿ । ಭಜಂತ್ರಿಗಳು ಶಕ್ತಿಪ್ರದಕ್ಷಿಣೆ ದಂಡ ನಮಸ್ಕಾರ ।
ಪ್ರಣಿಚಾರಬಿದ್ದ ಪುರ ಜನರು । ಹತ್ತಿ ಕಟವಾಂಜನದ ಚೆಲ್ವಿಕೆ ಕಂಭ ।
ಹನ್ನೆರಡು ಮಂಡಪ ಮತ್ತೆ ವೈಷ್ಣವರ ಸಂದಣಿ ಆಚಾರ್ಯರ ಪೂಜೆ ॥ ೨ ॥
ಹಿಂಡು ಹಿಂಡು ಎಲ್ಲ ಹರಕೆ ಒಪ್ಪಿರುವರು । ಹೊನ್ನು ಮುಡುಪುಗಳ್ನಾಕುವರು ।
ಚಂಡಿಕೆ ಇಡಿಸೋರು ಜಾವಳ ಬಿಡಿಸೋರು । ಪರಿಪರಿ ನೈವೇದ್ಯ ಮಾಡುವರು ಭೂ ।
ಮಂಡಲದೊಳು ಮಾನ್ಯ ನೀ ಮುದ್ದು ಶ್ರೀವೆಂಕಟೇಶ ವಿಠಲ ।
ಥಂಡಥಂಡದಲ್ಲಿ ಕುಳಿತು ಬಾಹೋನು ತೇರಿನಂತೆ ॥ ೩ ॥

## ಚಂದ್ರ ಗುಣಸಾಂದ್ರಾ - ವರದಗೋಪಾಲ ವಿಠಲ

ರಾಗ : ಮಧ್ಯಮವಾತಿ ಆದಿತಾಳ

ಚಂದ್ರ ಗುಣಸಾಂದ್ರಾ ॥ ಪ ॥ ರಾಘವೇಂದ್ರ ಗುರು ಸದ್ವೈಷ್ಣವ ಕುಮುದಕೆ ॥ ಅ । ಪ ॥
ಶ್ರೀರಘುರಾಮ ಪದಾಂಬುಜ ಭೃಂಗ । ಮಾರುತ ಮತ ಸುಭವಾರಿನಿಧಿಗೆ ಪೂರ್ಣ ॥ ೧ ॥
ಶ್ರೀಕರ ಹರಿಯ ನಿರಾಕರಿಸುವ ದುಷ್ಟ । ಭೀಕರ ಮಾಯ್ಗಳ ಮುಖಕಮಲಕೆ ಪೂರ್ಣ ॥ ೨ ॥
ವರದಗೋಪಾಲ ವಿಠಲನ ವಾರುತೆಗೆ । ಹರುಷ ಬಡುವ ಹರಿಭಕುತ ಚಕೋರಕೆ ॥ ೩ ॥

## ರಾಘವೇಂದ್ರ ಗುರುರಾಯಾ । ನೀ - ಗುರುಜಗನ್ನಾಥವಿಠಲ

ರಾಗ : ಸುರಟಿ ಆದಿತಾಳ

ರಾಘವೇಂದ್ರ ಗುರುರಾಯಾ । ನೀ ವೇಗದಿ ಪಿಡಿಯೆನ್ನ ಕೈಯಾ ॥ ಪ ॥
ಆಗಮ ಸಂಚಿತ ಭೋಗಗಳುಳ್ಳ ಭವ । ಸಾಗರದೊಳು ಬಿದ್ದೆ । ವೇಗದಿ ನೀ ಬಂದು ॥ ಅ । ಪ ॥

ಭಾವದ್ರವ್ಯ ಕ್ರಿಯದ್ವೈತಾ । ಇದರನು ಭಾವವ ತಿಳಿಯದೆ ನಿರುತ ।
ಸೇವಿಸಿ ಸಂತತ ಈ ವಿಧ ನರರನು ದೇವರೆಂದನುದಿನ ಭಾವಿಸಿದೆ ನಾ ॥ ೧ ॥

ಅಶನ ವಸನಕಾಗಿ ನಾಪರವಶದಲೆ ಶಿರಬಾಗಿ । ಅಸಮ ನಿನ್ನಯ ಪದಬಿಸಜ ಭಜಿಸದೆ ।
ವಸುಮತಿಯೊಳು ಬಲು ಹಸನಕೆಟ್ಟೆ ನಾ ॥ ೨ ॥

ಸಿರಿವರಗುರು ಜಗನ್ನಾಥ ವಿಠಲನ ವರನಾಥ । ಸರಿಯೆನಿಸಿದ ನಿನ್ನ ಪರಿಸರರೊಳೆನ್ನ ।
ಮರೆಯದೆ ಚರರೊಳು ಸರಿಯೆನಿಸೈ ನೀ ॥ ೩ ॥

## ಎದ್ದು ಬರುತಾರೆ ನೋಡೆ - ಗುರುಜಗನ್ನಾಥವಿಠಲ

ರಾಗ : ಪೀಲು ಆದಿತಾಳ

ಎದ್ದು ಬರುತಾರೆ ನೋಡೆ । ತಾ– । ವೆದ್ದು ಬರಿತಾರೆ ನೋಡೆ ॥ ಪ ॥
ಮುದ್ದು ವೃಂದಾವನ । ಮಧ್ಯದೊಳಗಿಂದ ತಿದ್ದಿ ಹಚ್ಚಿದ ನಾಮ ।
ಮುದ್ರೆ ಮುಂದೊಪ್ಪುತಲಿ ॥ ಅ । ಪ ॥

ಗಳದೊಳು ಶ್ರೀತುಳಸಿ ನಳಿನಾಕ್ಷಮಾಲೆಗಳು । ಚಲುವ ಮುಖದೊಳು ಪೊಳೆವ ದಂತಗಳಿಂದ ॥ ೧ ॥
ಹೃದಯ ಸದನದಲ್ಲಿ ಪದುಮನಾಭನ ಭಜಿಸಿ । ಮುದಮನದಿಂದ ನಿತ್ಯ ।ಸದಮಲರೂಪ ತಾಳಿ ॥ ೨ ॥
ದಾತ ಗುರುಜಗನ್ನಾಥ ವಿಠಲನ್ನ । ಪ್ರೀತಿಯ ಪಡೀಸುತ ದೂತನ ಪೊರೆಯುತ ॥ ೩ ॥

## ಮಂತ್ರಾಲಯ ಮಂದಿರ ಮಾಂ - ಅಭಿನವಜನಾರ್ದನವಿಠಲ

ರಾಗ : ಮಧ್ಯಮಾವತಿ ಆದಿತಾಳ

ಮಂತ್ರಾಲಯ ಮಂದಿರ ಮಾಂ ಪಾಹಿ ॥ ಪ ॥
ಮಧ್ವಾಭಿಧಮುನಿ ಸದ್ವಂಶೋದ್ಭವ । ಅದ್ವೈತಾರಣ್ಯ ಸದ್ವಿತೀಹೋತ್ರ ॥ ೧ ॥
ಸುಧೀಂದ್ರಯತಿಕರ ಪದುಮೋದ್ಭವ । ಸುಧೀ ಗುರು ರಾಘವೇಂದ್ರ ಕೋವಿದ ಕುಲವರ್ಯ ॥ ೨ ॥
ದಂಡಧರ ಕೋದಂಡಪಾಣಿಪದ । ಪುಂಡರೀಕ ಧ್ಯಾನ ತಂಡಮತೇ ಹೇ ॥ ೩ ॥
ಸುರಧೇನು ಕಲ್ಪತರು ವರಚಿಂತಾಮಣಿ । ಶರಣಾಗತಜನ ಪರಿಪಾಲ ತ್ವಂ ॥ ೪ ॥

ಅಭಿನವ ಜನಾರ್ದನವಿಠಲನ ಪದಯುಗಳ । ಧ್ಯಾನಿಪ ಮುನಿಕುಲೋತ್ತಂಸಾ ॥ ೫ ॥

## ಗುರುವೇ ನೀ ಕರುಣಿಸದಿರಲು - ಅಭಿನವಜನಾರ್ದನವಿಠಲ

ರಾಗ : ಧನ್ಯಾಸಿ ಅಟತಾಳ

ಗುರುವೇ ನೀ ಕರುಣಿಸದಿರಲು । ಉದ್ಧರಿಸುವ ಧೊರೆಗಳೀ ಧರೆಯೊಳುಂಟೆ ॥ ಪ ॥
ಕರುಣಾಕರ ಎನ್ನ ಕರೆದು ಕೈಪಿಡಿದು ನೀ । ಕರುಣಿಸು ಸುಧೀಂದ್ರಕರಜ ರಾಘವೇಂದ್ರ ॥ ಅ । ಪ ॥

ತರುಣೀ ತರಳರೀ ಶರೀರ । ಬಂಧುಗಳುಪಚರಿಸಲಾದರಿಪರೆಲ್ಲ ॥
ಚರಣವಿಲ್ಲದೆ ಪಕ್ಕಮುರಿದು ಬಿದ್ದ ಗುಬ್ಬಿ ಮರಿಯಂತೆ ಬಾಯ್ಬಿಡುತಿರಲು ನೋಳ್ಪರೆ ಅಸ್ಮತ್ ॥ ೧ ॥

ಕ್ಷಿತಿಯೊಳು ಭಕ್ತರ ವಾಂಛೆಗಳಿತ್ತು ಪೊರೆವ । ಕೀರುತಿ ಕೇಳಿ ಪತಿತಪಾವನನೆಂದು ನತನಾಗಿ ॥
ಸ್ತುತಿಸಿ ತ್ವರಿ । ತದಿ ಬಂದು ಶರಣಾಗತನಾದ ಮೇಲಿನ್ನು ॥ ೨ ॥

ದಿನಕರ ಕಮಲ ಜಾತವೆನಿಪ । ರಾಮರ ಪಾದವನಜಾರಾಧಕನೆನಿಪ ಮುನಿಕುಲೋತ್ತಂಸ ॥
ಸಜ್ಜನ ಶಿಖಾಮಣಿ ಗುಣ । ಘನ ಅಭಿನವ ಜನಾರ್ದನ ವಿಠಲನ ದೂತ ॥ ೩ ॥

## ನೋಡಿದೆ ಗುರುಗಳ ನೋಡಿದೆ - ವಿಜಯವಿಠಲ

ರಾಗ : ಮೋಹನ ಭೈರವಿ ತ್ರಿಪುಟತಾಳ

ನೋಡಿದೆ ಗುರುಗಳ ನೋಡಿದೆ ॥ ಪ ॥
ನೋಡಿದೆನು ಗುರುರಾಘವೇಂದ್ರರ । ಮಾಡಿದೆನು ಭಕುತಿಯಲಿ ವಂದನೆ ।
ಬೇಡಿದೆನು ಕೊಂಡಾಡಿ ವರಗಳ । ಈಡು ಇಲ್ಲದೆ ಕೊಡುವ ಗುರುಗಳ ॥ ಅ । ಪ ॥

ಮೊದಲು ಗಾಂಗೆಯ ಶಯ್ಯಜನು ಈ ನದಿಯ ತೀರದಲ್ಲಿ ಯಾಗವ
ಮುದದಿ ರಚಿಸಿ ಪೂರೈಸಿ ಪೋಗಿರಲದನು ತಮ್ಮೊಳು ತಿಳಿದು ತವಕದಿ ॥
ಹೃದಯ ನಿರ್ಮಲರಾಗಿ ರಾಗದಿ ಬುಧಜನರ ಸಮ್ಮೇಳದಲಿ ಸಿರಿ ।
ಸದನನಂಘ್ರಿಯ ತಿಳಿದು ನೆನೆವರ ಉದಿತ ಭಾಸ್ಕರನಂತೆ ಪೊಳೆವರ ॥ ೧ ॥

ಅಲವಬೋಧ ಮಿಕ್ಕಾದ ಮಹಾಮುನಿಗಳು ಸಾಂಶರು ಒಂದು ರೂಪದಿ ।
ನೆಲೆಯಾಗಿ ನಿತ್ಯದಲಿ ಇಪ್ಪರು ಒಲಿಸಿಕೊಳ್ಳುತ ಹರಿಯ ಗುಣಗಳ ॥
ತಿಳಿದು ತಿಳಿಸುತ ತಮ್ಮ ತಮಗಿಂದಧಿಕರಿಂದುಪದೇಶ ಮಾರ್ಗದಿ ।
ಕಲಿಯುಗದೊಳು ಕೇವಲ ಕತ್ತಲೆಯ ಹರಿಸುವ ಸೊಬಗ ಸಂತತ ॥ ೨ ॥

ರಾಮ ನರಹರಿ ಕೃಷ್ಣ ಕೃಷ್ಣರ ನೇಮದಿಂದ ಮೂರ್ತಿಗಳ ಪಾದ ।
ತಾಮರಸ ಭಜನೆಯನು ಮಾಳ್ಪರು ಕೋಮಲಾಂಗರು ಕಠಿಣಪರವಾದಿ ॥
ಸ್ತೋಮಗಳ ಮಹಾಮಸ್ತಕಾದ್ರಿಗೆ ಭೂಮಿಯೊಳು ಪತಿಯೆನಿಸಿದಾ ಯತಿ ।

ಯಾಮ ಯಾಮಕೆ ಎಲ್ಲರಿಗೆ ಶುಭ ಕಾಮಿತಾರ್ಥವ ಕರೆವ ಗುರುಗಳ ॥ ೩ ॥

ನೂರು ಪರ್ವತ ವರ್ಷ ಬಿಡದಲೆ ಚಾರು ವೃಂದಾವನದಲಿ ವಿ ।
ಸ್ತಾರ ಆರಧನೆಯು ತೊಲಗದೆ ವಾರವಾರಕೆ ಆಗುತಿಪ್ಪುದು ॥
ಸಾರೆ ಕಾರುಣ್ಯದಲಿ ಲಕುಮೀ ನಾರಾಯಣತಾ ಚಕ್ರರೂಪದಿ ।
ಸಾರಿದವರಘ ಕಳೆದು ಇವರಿಗೆ ಕೀರುತಿಯ ತಂದಿಪ್ಪುದನುದಿನ ॥ ೪ ॥

ಮಿತವು ಎನದಿರಿ ಇಲ್ಲಿ ದಿನ ದಿನ ಅತಿಶಯವೆ ಆಗುವುದು ಭೂಸುರ ।
ತತಿಗೆ ಭೋಜನ ಕಥಾಶ್ರವಣ ಭಾರತ ಪುರಾಣಗಳಿಂದಲೊಪ್ಪುತ ॥
ಕ್ಷಿತಿಯೊಳಗೆ ಮಂಚಾಲೆ ಗ್ರಾಮಕೆ ಪ್ರತಿಯು ಇಲ್ಲವೆಂದೆನಿಸಿ ಕೊಂಬುದು ।
ಪತಿತಪಾವನ ವಿಜಯವಿಠಲನ ತುತಿಸಿಕೊಳ್ಳುತ ಮೆರೆವ ಗುರುಗಳ ॥ ೫ ॥

## ರಾಘವೇಂದ್ರ ಗುರುರಾಯ ರಮಣೀಯ - ವಿಜಯವಿಠಲ

ರಾಗ : ಮುಖಾರಿ ಛಾಪುತಾಳ

ರಾಘವೇಂದ್ರ ಗುರುರಾಯ ರಮಣೀಯ ಕಾಯ ॥ ಪ ॥
ರಾಘವೇಂದ್ರ ಪಾದಾಂಭೋಜ ಭೃಂಗ ಭವಭಯಭಂಗಾ ॥ ಅ. ಪ ॥

ನೋಡಿದೆ ನಿನ್ನ ಮಹಿಮಾ ಹಾಡಿ ಪಾಡುವೆನೋ ನಿತ್ಯಾ ।
ಆಡಿಕೊಂಡಾಡಲು ಬಲು ಗೂಢವಾಗಿದೆ ॥
ನಾಡಿನೊಳು ಒಮ್ಮೆ ಸ್ಮರಣೆಮಾಡಿದವ ಧನ್ಯಾ ಯೆನ್ನ ।
ಮೂಢಬುದ್ಧಿಯನು ಕಡಿಸು ಬಿಡಿಸು ಸಜ್ಜನರೊಳಗೆ ॥ ೧ ॥

ನಾಮಾಭಿಮಾನಿ ನಿಡಿಸು ಉಮಾಪತಿ ಪರಿಯಂತವು ।
ಮಾಣ ಎರಗಲಿ ಯಾಮ ಯಾಮಕೆ ॥
ಕಾಮಿಪೆ ಇದನೆ ಗುರುವೆ ನಾಮದಕ್ಷಿಣ ಮಾರ್ಗ ।
ನೇಮ ತಪ್ಪದಂತೆ ತಿಳಿಸಿ ಭೌಮಬುದ್ಧಿ ಕೊಡಿಸೋದು ॥ ೨ ॥

ಚಿಂತಾಮಣಿ ಕಂಡಮಾತ್ರ ಭ್ರಾಂತಿಗೊಳಿಪ ವಿಷಮಾ
ಚಿಂತಿಸಿ ಬೇಡುವುದು ಲೋಕಾಂಶದ ಸುಖದ ॥
ಇಂತು ಬಾಗಿ ನಿಂತು ಪೇಳುವಂತೆ ಮಾಡದಿರು ಕರುಣಿ ।
ನಂತಾ ಸಂತಾನ ನಿನ್ನ ಪಾದಾಕ್ರಾಂತನಾಗಿ ತುತಿಸುವೇ ॥ ೩ ॥

ಸಾರಿ ಸಾರಿಗೆ ವಾಯು ಚಿಂತಾತಾರತಮ್ಯ ತತ್ವದ ವಿ- ।
ಚಾರಗೈದು ನಲಿದಾಡಿ ಮೇರೆ ಇಲ್ಲದೆ ॥
ಈಶ ಇಂದಿರೇಶನ್ನ ಹೃದ್ವಾರಿಜದೊಳು ನಿಲ್ಲಿಸಿ ಆರಾಧನೆಯ ।
ಮಾಡುವ ವೈಕಾರಿಕ ಭಾಗ್ಯವು ಬರಲಿ ॥ ೪ ॥

ನಮೋ ನಮೋ ಯತಿರಾಜ ಮರುತಾಹಿತ ಅನು – ।
ಪಮ ಚರಿತ ಚಾರುಹಾಸನೆನಿಪ ನಿನ್ನ ॥
ಹೆಮೆಯಿಂದಲಿಪ್ಪ ವರಬೊಮ್ಮ ವಿಜಯವಿಠಲನ್ನ ।
ಪದಕಮಲಾರ್ಚಿಪ ಜ್ಞಾನೋತ್ತಮ ತುಂಗಭದ್ರಾವಾಸ ॥ ೫ ॥

## ಯಾಕೆ ಮೂಕನಾದ್ಯೋ - ಜಗನ್ನಾಥ ವಿಠಲ

ರಾಗ : ಪೂರ್ವಿ ಮಠ್ಯತಾಳ

ಯಾಕೆ ಮೂಕನಾದ್ಯೋ । ಗುರು । ನೀನ್ಯಾಕೆ ಮೂಕನಾದ್ಯೋ ॥ ಪ ॥
ಯಾಕೆ ಮೂಕನಾದಿ ಲೋಕಪಲಕ ಎನ್ನ । ಸಾಕುವರ್‍ಯಾರ್‍ಯೆಯ ಶ್ರೀಕರ ರಾಘವೇಂದ್ರ ॥ ಅ । ಪ ॥

ಹಿಂದಕ್ಕೆ ನೀಯೆನ್ನ ಮುಂದೆ ಸುಳಿದಾಡಿದೆ । ಮಂದಿಯೊಳಗೆನ್ನ । ಮಾಂದನ್ನ ಮಾಡಿದೀಗ ॥ ೧ ॥
ಬೇಕಾಗದಿದ್ದರಿನ್ಯಾಕೆ ಕೈಯನು ಪಿಡಿದೆ । ಕಾಕುಜನರೊಳೆನ್ನನು ನೂಕಿಬಿಟ್ಟು ನೀನು ॥ ೨ ॥
ಈಗ ಪಾಲಿಸಿದರೆ ಯೋಗಿಕುಲವರ್ಯ । ರಾಘವೇಂದ್ರನ ಭವಸಾಗುವದ್ಹಾಂಗಯ್ಯ ॥ ೩ ॥
ನಿನ್ನಂಥ ಕರುಣಿಲ್ಲ ಎನ್ನಂಥ ಕೃಪಣಿಲ್ಲ । ಘನ ಮಹಿಮ ನೀ ಎನ್ನನು ಬಿಟ್ಟೀಗ ॥ ೪ ॥
ಜನನಿಯು ನೀ ಎನಗೆ ಎನ್ನ ಜನಕನಯ್ಯ । ಮನ್ನಿಸೋ ನೀ ನಿತ್ಯಾನನ್ಯ ಶರಣ್ಯ ॥ ೫ ॥
ಎಂದಿಗಾದರು ನಿನ್ನ ಪೊಂದಿ ಕೊಂಡವನಲ್ಲೋ । ಇಂದು ನೀ ಬಿಟ್ಟರೆನ್ನ ಮುಂದೆ ಕಾಯುವರ್‍ಯಾರೋ॥೬॥
ನಾಥನು ನೀ ಅನಾಥನು ನಾನಯ್ಯ । ಪಾತಕರರಿ ಜಗನ್ನಾಥವಿಠಲದಾಸ ॥ ೭ ॥

## ಗುರುರಾಯ ಗುರುರಾಯ - ರಮಾಪತಿ ವಿಠಲ

ರಾಗ : ಕಾಪಿ ಆದಿತಾಳ

ಗುರುರಾಯಾ ಗುರುರಾಯ ॥ ಪ ॥ ದುರಿತ ಕಳೆಯೋ ದಯಾಸಾಂದ್ರ । ರಾಘವೇಂದ್ರ ॥ ಅ । ಪ ॥

ನಮಿಸುವೆ ನಿನ್ನಡಿಗಮಿತವಿಧದಿ । ಮಮ ಶ್ರಮಗಳ ಕಳೆಯೋ ಹೇ ವಿಮಲಸುತೇಜ ॥ ೧ ॥
ಅರ್ತಜನರ ಇಷ್ಟಾರ್ಥಗಳನ್ನೆಲ್ಲ । ಪೂರ್ತಿಗೊಳಿಸಿ ಕೃತಾರ್ಥರ ಮಾಡುವಿ ॥ ೨ ॥
ಪವನರ ವರ ಮತಪ್ರವರ್ತನೆನಿಸಿ । ಶ್ರೀವರನರ್ಚಿಸುತಿಹ ಯತಿಕುಲತಿಲಕ ॥ ೩ ॥
ಸರ್ವತ್ರದಿ ಹರಿಯಿರುವುದು ನೋಡಿ । ಪೂರ್ವ ದೇವತೆಗಳ ಗರ್ವಹರನೆ ಮದ್ ॥ ೪ ॥
ನೀನೇ ಗತಿಯೋ ಹೇ ದೀನವತ್ಸಲನೆ । ಜ್ಞಾನವನ್ನು ಕೊಡು ನಾನೆಂಬುದು ಕಳೆ ॥ ೫ ॥
ಪತಿತನು ನಾ ನಿಮ್ಮತಿಶಯ ಗುಣಗಳ । ತುತಿಸಬಲ್ಲೆನೆ ಯತಿ ಕುಲವರ್ಯ ॥ ೬ ॥
ಮಾರುತಿವರದ ರಮಾಪತಿ ವಿಠ್ಠಲನ ತಾರತಮ್ಯ ತಿಳಿಸ್ಯಾರಾಧನೆ ಕೊಡು ॥ ೭ ॥

## ಕೂಸಿನ ಕಂಡೀರ್‍ಯಾ - ಮಧ್ವೇಶ ವಿಠಲ

ರಾಗ : ನಾದನಾಮಕ್ರಿಯ ಆದಿತಾಳ

ಕೂಸಿನ ಕಂಡೀರ್ಯಾ । ಸುಪ್ರಹ್ಲಾದನ ಕಂಡೀರ್ಯಾ ॥ ಪ ॥
ರಾಕ್ಷಸ ಕುಲದಲಿ ಜನಿಸಿತು ಕೂಸು । ರಾಧಾಕೃಷ್ಣರ ಭಜಿಸಿತು ಕೂಸು ।
ರಾಗದ್ವೇಷಗಳ ಬಿಟ್ಟಿತು ಕೂಸು । ರಾಮನ ಪಾದವ ನೆನೆಯುವ ಕೂಸು ॥ ೧ ॥
ಘನ ಹರಿ ಕಂಭದಿ ತೋರಿತು ಕೂಸು । ಗಳಿಸಿತು ಕೃಷ್ಣನ ಪ್ರೇಮದ ಕೂಸು ।
ಘನಮಂತ್ರಾಲಯವಾಸಿಪ ಕೂಸು । ವೇಣುಗೋಪಾಲನ ಪ್ರೀತಿಯ ಕೂಸು ॥ ೨ ॥
ಪ್ರಸಿದ್ಧ ವ್ಯಾಸರಾಯರೆಂಬೊ ಕೂಸು । ಪ್ರವೀಣ ವಿದ್ಯೆಯೊಳೆನಿಸಿದ ಕೂಸು ।
ಪ್ರಹ್ಲಾದನೆಂಬ ಆಹ್ಲಾದ ಕೂಸು । ಪ್ರಸನ್ನ ಮಧ್ವೇಶ ವಿಠಲನ ಕೂಸು ॥ ೩ ॥

## ಬಾರೋ ನಮ್ಮ ಮನೆಗೆ - ಮಧ್ವೇಶ ವಿಠಲ

ರಾಗ : ಕಮಟ್ ಅಟತಾಳ

ಬಾರೋ ನಮ್ಮ ಮನೆಗೆ । ಶ್ರೀ ರಾಘವೇಂದ್ರ ॥ ಪ ॥
ಬಾರೋ ದುಃಖಾಪಹಾರ ಬಾರೋ ದುರಿತದೂರ ।
ಬಾರೈಯ್ಯ ಸನ್ಮಾರ್ಗ ದಾರಿ ತೋರುವ ಗುರು ॥ ಅ । ಪ ॥

ಬಾಲಪ್ರಹ್ಲಾದನಾಗಿ ಖೂಳ ಕಶ್ಯಪುವಿಗೆ ಲೋಲ ಶ್ರೀನರಹರಿ ಕಾಲರೂಪನ ತೋರ್ದ ॥ ೧ ॥
ವ್ಯಾಸನಿರ್ಮಿತಗ್ರಂಥ ಮಧ್ವ ಕೃತ ಭಾಷ್ಯವ । ಬೇಸರದೆ ಓದಿ ಮೆರೆವ ವ್ಯಾಸಮುನಿಯೇ ॥ ೨ ॥
ಮಂತ್ರಗೃಹದಲಿ ನಿಂತ ಸುಯತಿವರ್ಯ । ಅಂತ ತಿಳಿಯದೋ ನೀ ಅಂತರದೊಳು ॥ ೩ ॥
ಭೂತಪ್ರೇತಗಳನು ಘಾತಿಸಿಬಿಡುವಂಥ । ಖ್ಯಾತಿಯುತ ಯತಿನಾಥನೆ ತುತಿಸುವೆ ॥ ೪ ॥
ಕುಷ್ಟರೋಗಾದಿಗಳ ನಷ್ಟ ಮಾಡುವಂಥ । ಅಷ್ಟಮಹಿಮೆತುತ ಶ್ರೇಷ್ಠ ಮುನಿಯೇ ॥ ೫ ॥
ಕರೆದರೆ ಬರುವೆಂಬೋ ಕೀರುತಿ ಕೇಳಿ ನಾ । ಕರೆದೆನೊ ಕರುಣದಿ ಕರವ ಪಿಡಿಯೋ ॥ ೬ ॥
ಭಕ್ತವತ್ಸಲನೆಂಬ ಬಿರಿದಿನಿಂದಾದರಾ । ಸಕ್ತನ ಮೊರೆ ಕೇಳಿ ಮಧ್ವೇಶ ವಿಠಲದಾಸ ॥ ೭ ॥

## ಸಾಗಿ ಬಾರೋ ಗುರುರಾಘವೇಂದ್ರ - ಶಾಮಸುಂದರ

ರಾಗ :

ಸಾಗಿ ಬಾರೋ ಗುರುರಾಘವೇಂದ್ರರಾಯ । ವರ ಸತ್ಕವಿಗೇಯ ॥ ಪ ॥
ಕೂಗುತ ಕರೆಯುತ ಭಾಗವತರ ಮೊರೆಯಾ । ಲಾಲಿಸೋ ಮುನಿವರ್ಯ ॥ ಅ । ಪ ॥

ಪಾವನ ಘನ ವೃಂದಾವನ ಮಂದಿರನೇ । ಸದ್ಗುಣ ಬಂಧುರನೇ ॥
ಪಾವಮಾನಿ ಮತ ಶರಧಿಗೇ ಚೆಂದಿರನೇ । ದರ ಸಮ ಕಂದರನೇ ॥
ಭಾವಣಿಪುರ ಸುಜನಾವಳಿ ಕೋರಿಕೆಯಾ । ಗೆರೆಯಲು ಶುಭಕಾಯ ॥ ೧ ॥

ಶಾರಣು ಜನರು ಮೈ ಮರೆದು ಕರೆಯಲಾಗಿ । ನಿಲ್ಲದೇ ವರಯೋಗಿ ॥
ಭರದಿ ಬಂದು ಕರ ಪಿಡಿಯುವ ದೊರೆ ನೀನು । ಎಂದರಿತೆವು ಸುರಧೇನು ॥
ಕರುಣಾಕರ ಗತಿ ನಾಯಕ ನೀನೆಂದು । ಭಜಿಪೆವು ದಯಾ ಸಿಂಧು ॥ ೨ ॥

ಶಾಮಸುಂದರನ ಪ್ರೇಮ ಪಡೆದಾತ । ಜಗದೊಳಗೆ ಪ್ರಖ್ಯಾತ ॥
ನಿಯಮದಿ ಭಜಿಪರ ಕಾಮಿತ ಕೊಡುವಾತ । ದೈಶಿಕ ಕುಲನಾಥ ॥
ಹೇಮಶಯ್ಯ ಸುಕುಮಾರ ಮಮತೆಯಿಂದ ಮಂತ್ರಾಲಯದಿಂದ ॥ ೩ ॥

## ಕೋರಿ ಕರೆವೆ ಗುರು - ವಿಠಲೇಶ

ರಾಗ :

ಕೋರಿ ಕರೆವೆ ಗುರು ಶ್ರೀರಾಘವೇಂದ್ರನೆ ಬಾರೋ ಮಹಾ ಪ್ರಭುವೇ
ಚಾರು ಚರಣಯುಗ ಸಾರಿ ನಮಿಪೆ ಬೇಗ ಬಾರೋ
ಹೃದಯ ಸುಖ ಸಾರ ರೂಪವ ತೋರೋ ॥ ಪ ॥

ಎಲ್ಲಿ ನೋಡಲು ಹರಿ ಅಲ್ಲೆ ಕಾಣುವನೆಂದು ಕ್ಷುಲ್ಲ ಕಂಬವ ನೊಡೆದು ।
ನಿಲ್ಲದೆ ನರಹರಿ ಚೆಲ್ವಿಕೆ ತೋರಿದ ಫುಲ್ಲಲೋಚನ ಶಿಶು ಪ್ರಹ್ಲಾದನಾಗಿ ಬಾರೋ ॥ ೧ ॥

ದೋಷವ ಕಳೆದು ಸಿಂಹಾಸನವೇರಿದ ದಾಸ ಕುಲವ ಪೊರೆದಾ ।
ಶ್ರೀಶನರ್ಚಕನಾಗಿ ಪೋಷಿಸಿ ಹರಿಮತ ವ್ಯಾಸ ತ್ರಯವ ಗೈದ ವೇಷ ತಳೆದು ಬಾರೋ ॥ ೨ ॥

ಮೂಜಗ ಮಾನಿತ    ತೇಜೋ ವಿರಾಜಿತ ಮಾಸದ ಮಹಾ ಮಹಿಮಾ ।
ಓಜೆಗೊಳಿಸಿ ಮತಿ ರಾಜೀವ ಬೋಧದಿ ಪೂಜೆಗೊಂಬುವ ಗುರುರಾಜ ರೂಪದಿ ಬಾರೋ ॥ ೩ ॥

ಮಂತ್ರ ಸದನದೊಳು ಸಂತ ಸುಜನರಿಗೆ ಸಂತೋಷ ಸಿರಿಗರೆದೂ ಕಂತು ಪಿತನ ಪದ ।
ಸಂತತ ಸೇವಿಪ ಶಾಂತ ಮೂರುತಿ ಎನ್ನ ಅಂತರಂಗದಿ ಬಾರೋ ॥ ೪ ॥

ಈ ಸಮಯದಿ ನನ್ನಾಸೆ ನಿನ್ನೊಳು ಬಲು ಸೂಸಿ ಹರಿಯುತಿಹುದೂ ।
ಕೂಸಿಗೆ ಜನನಿ ನಿರಾಶೆ ಗೊಳಿಸುವಳೆ ತೋಷ ತಳೆದು ವಿಠಲೇಶ ಹೃದಯ ಬಾರೋ ॥ ೫ ॥

## ತುಂಗಾ ತೀರ ವಿರಾಜಂ - ವರ ಕಮಲೇಶ

ರಾಗ : ಮಲಯಮಾರುತ / ದೇಶಿ ಆದಿತಾಳ

ತುಂಗಾತೀರ ವಿರಾಜಂ ಭಜಮನ । ರಾಘವೇಂದ್ರ ಗುರುರಾಜಂ ಭಜಮನ ॥ ಪ ॥

ಮಂಗಳ ಕರ ಮಂತ್ರಾಲಯ ವಾಸಂ । ಶೃಂಗಾರಾನನ ರಾಜಿತ ಹಾಸಂ ।
ರಾಘವೇಂದ್ರ ಗುರು ರಾಜಂ ಭಜಮನ ॥ ೧ ॥

ಕರದೃತ ದಂಡ ಕಮಂಡಲ ಮಾಲಂ । ಸುರುಚಿರ ಚೇಲಂ ಧೃತ ಗುಣ ಶೀಲಂ ।
ರಾಘವೇಂದ್ರ ಗುರುರಾಜಂ ಭಜಮನ ॥ ೨ ॥

ಸುಂದರ ಸುರುಚಿರ ಕಾಯ ಸುಶೀಲಂ । ವರ ಕಮಲೇಶಾರ್ಪಿತ ನಿಜ ಸಕಲಂ ।
ರಾಘವೇಂದ್ರ ಗುರು ರಾಜಂ ಭಜಮನ ॥ ೩ ॥

## ರಾಘವೇಂದ್ರ ನಮೋ - ವಿಠಲೇಶ

ರಾಗ :

ರಾಘವೇಂದ್ರ ನಮೋ । ಗುರು ರಾಘವೇಂದ್ರ ನಮೋ ॥ ಪ ॥
ಗುರುರಾಘವೇಂದ್ರ ವರಯೋಗಿ ಸುಗುಣ ವೈರಾಗಿ ।
ಭಕುತ ಹಿತಕಾಗಿ ಅವತರಿಸಿ ಬಂದ ಯತಿ ಚಂದ್ರ ॥ ೧ ॥

ಪಿತನಿಂದ ಬಹಳ ವ್ಯಥೆಯಾಗಿ ಹರಿಯ ನೆರೆಕೂಗಿ ।
ಕಂಬ ಗುಡುಗಾಗಿ ನರಹರಿಯ ತಂದ ಹಸುಳೇಂದ್ರ ॥ ೨ ॥

ಕುಹು ಯೋಗ ಕಳೆದ ದಿವಿಯೋಗಿ ಧರೆಗೆ ದೊರೆಯಾಗಿ ।
ಧರ್ಮಪ್ರಭುವಾಗಿ ಕರಿನಾಡ ನಾಳ್ದ ರಾಜೇಂದ್ರ ॥ ೩ ॥

ಸುರಧೇನು ಕಲ್ಪತರುವಂತೆ ಭಕುತ ಮನದಂತೆ ।
ಸೌಖ್ಯ ದೊರೆವಂತೆ ಸಲೆ ಕಾಯ್ದ ಕೀರ್ತಿಯುತ ಚಂದ್ರ ॥ ೪ ॥

ಗುರುಸಾರ್ವಭೌಮ ಜಗಜ್ಯೋತಿ ಮಧ್ವಮತ ಕೀರ್ತಿ ।
ಕಾವ್ಯ ಕಲೆ ಮೂರ್ತಿ ಹರಿಕೃಪಾ ಪಾತ್ರ ಮಹಿಮೇಂದ್ರ ॥ ೫ ॥

ಸುಯಮೀಂದ್ರ ಸೇವ್ಯ ಗುರುರಾಜ ನಿತ್ಯ ನವ ತೇಜ ।
ಸಂಭ್ರಮ ವಿರಾಜ ಹೊಳೆ ಹೊಳೆವ ಚಿನಯ ಮಹೇಂದ್ರ ॥ ೬ ॥

ಶಿರಬಾಗಿ ಮಣಿವೆ ಗುರುದೇವ ಕೊಡುಗೆ ಮತಿಭಾವ ।
ದಿವ್ಯ ತವ ಸೇವ ವಿಠಲೇಶಪ್ರೀಯ ಪ್ರಭು ಚಂದ್ರ ॥ ೭ ॥

## ಬಂದೇವು ಮಂತ್ರಾಲಯಕೆ

ರಾಗ :

ಬಂದೇವು ಮಂತ್ರಾಲಯಕೆ ಭವ ಬಂಧನವ ಕಳೆವುದಕೆ ।
ಭವಬಂಧನವ ಕಳೆವುದಕ್ಕೆ ಗುರುರಾಯರ ನೋಡುವುದಕೆ ॥ ಪ ॥

ರಾಯರ ಮುದ್ದು ಮಹಾದ್ವಾರ ಎಷ್ಟೇಳಲದರ ವಿಸ್ತಾರ ।
ರತ್ನ ಮಾಣಿಕದಾ ಗೋಪುರ ಅದರಲ್ಲಿ ನಿಂತನೆ ಧೀರಾ ॥ ೧ ॥

ತುಂಗಭದ್ರಾ ಸ್ನಾನವ ಮಾಡಿ ಮಂಚಾಲೆ ರಾಯರ ನೋಡಿ ।
ಮುದದಿಂದ ಪದಗಳ ಪಾಡಿ ಗುರು ರಾಯರನು ಕೊಂಡಾಡಿ ॥ ೨ ॥

ನರಸಿಂಹ ಭಕ್ತನೆ ಈತ ಪ್ರಹ್ಲಾದ ರಾಯನೆ ಈತ ।
ಗುರುಸಾರ್ವಭೌಮನೆ ಈತ ಭವರೋಗ ವೈದ್ಯನೇ ಈತ ॥ ೩ ॥

## ಬಾಗಿನಮಿಪೆ ಗುರುರಾಘವೇಂದ್ರ - ಸಿರಿಕಾಂತ ವಿಠಲ

ರಾಗ : ಮೋಹನ

ಬಾಗಿನಮಿಪೆ ಗುರುರಾಘವೇಂದ್ರರಡಿದಾವರೆಗಳಿಗೆ ಸದಾ ।
ಯೋಗಿ ವರ್ಯ ಸದ್ಭಕ್ತಜನಾಶ್ರಯನಾಗಿ ಮೆರೆಯುವ ಮಹಾಮಹಿಮರಾ ॥ ಪ ॥

ಗಂಗಾಜನಕ ವಿಹಂಗಾಧಿಪಧ್ವಜ ಮಂಗಳಾಂಗ ಹರಿಯಾ ।
ಶೃಂಗಾರವ ನೋಡುತ ಹಿಗ್ಗುತವರ ತುಂಗಾತೀರದಿ ಶೋಭಿಪರಾ ॥ ೧ ॥
ಹಿಂದಿನ ಪಾಪಗಳಿಂದೊದಗಿದರುಜೆಯಿಂದ ತೊಳಲಿ ಬಳಲಿ ।
ವಂದಿಪರಿಗೆ ಧೀರ್ಘಾಯುರಾರೋಗ್ಯವ ಕುಂದದೆ ಧನಗಳನೂ ಕೊಡುವಾ ॥ ೨ ॥
ಶ್ರೀ ಸಿರಿಕಾಂತ ವಿಠಲನಂಘ್ರಿದ್ವಯ ದಾಸರೊಳಿವ ಶ್ರೇಷ್ಠ ।
ಸಾಸಿವೆಯಷ್ಟು ಆಯಾಸಗೊಳಿಸದೆಲೆ ಪೋಷಿಪ ಸಂತುಷ್ಟ ಮಾನಸರಾ ॥ ೩ ॥

## ಬಂದ ದುರಿತವ ಕಳೆಯೋ - ಮಧ್ವೇಶವಿಠಲ

ರಾಗ:

ಬಂದ ದುರಿತವ ಕಳೆಯೋ ತಂದೆ ಗುರುರಾಯ ।
ಕಂದನಾ ಬವಣೆಯನು ಇರಿದು ನೋಡಿದಿರಯ್ಯ ॥ ಪ ॥

ನಿನ್ನ ಹೃದ್ಗುಹವಾಸಿ ನರಹರಿಯ ನಾಮವನು । ಅನುದಿನವು ಬಿಡದೆ ಭಜಿಸುತಿರಲೂ ॥
ಇನ ಕಂಡ ಹಿಮದಂತೆ ತನುಬಾಧೆ ಓಡುವುದು ।
ಅನುಭವಕೆ ತಂದುಕೊಡುವ ಮುನಿ ಶಿಖಾಮಣಿಯೇ ॥ ೧ ॥

ನಿನ್ನ ಬಾಧೆಯನು ಶ್ರೀ ನರಹರಿಯು ಸಹಿಸದಲೆ । ಸನ್ನುತದಿ ಬಂದಂತೆ ಸುಧೀಂದ್ರ ಕರಜಾ ।
ಖಿನ್ನನಾಗಿಪ್ಪೆನ್ನ ಚನ್ನಾಗಿ ಸಲಹಯ್ಯ । ಅನ್ಯನೆನಿಸದಲೆ ಶ್ರೀಮೋದಾರ್ಯ ಮತಚಂದ್ರ ॥ ೨ ॥

ಪ್ರಹ್ಲಾದನೆಂದೆನಿಸಿ ತಂದೆ ಶಾಪವ ಕಳೆದೆ । ಒಳ್ಳೆ ಶಾಸ್ತ್ರವ ಪೇಳಿ ಓಡಿಸಿದೆ ಮಾಯಿಗಳ ॥
ಬಲ್ಲಿದ ಮಧ್ವೇಶವಿಠಲನ ಕೀರುತಿಯ । ಮೇಲಾಗಿ ಪೊಗಳುವ ಮಂತ್ರಾಲಯಾ ವಾಸಿ ॥ ೩ ॥

## ಏಕೆ ಬೃಂದಾವನದಿ - ಕಮಲೇಶ ವಿಠಲ

ರಾಗ : ರಾಗಮಾಲಿಕಾ ತ್ರಿಸ್ರಪೂರಕತಾಳ

ಏಕೆ ಬೃಂದಾವನದಿ ನೆಲೆಸಿರುವೆ ಗುರುವೇ ॥ ಪ ॥
ಶ್ರೀಕಾಂತ ನೊಲಿಸಿದುದು ಸಾಕಾಗಲಿಲ್ಲೆಂದು । ಏಕಾಂತ ಬಯಸಿದೆಯಾ ಶ್ರೀರಾಘವೇಂದ್ರಾ ॥ ಅ । ಪ ॥

ಹಿಂದೆ ನಿನಗಾಗಿ ನರಹರಿಯು ಕಂಬದಿ ಬಂದ । ಮುಂದೆ ನಂದನ ಕಂದ ನಿನ್ನೆದುರು ಕುಣಿದ ॥
ಒಂದು ಕ್ಷಣ ಬಿಟ್ಟಿರದೆ ಹರಿಯು ನಲಿಯುತಿರೆ । ಇನ್ನಾರ ಒಲಿಸಲೆಂದು ತಪಗೈಯುತಿರುವೆ ॥ ೧ ॥

ಇಷ್ಟವಿಲ್ಲದ ರಾಜ್ಯವಾಳಿ ಬಹು ವರ್ಷಗಳು । ಶ್ರೇಷ್ಠ ನೀ ಬಹು ಬಳಲಿ ಆಯಾಸಗೊಂಡೆಯಾ ॥
ದುಷ್ಟವಾದಿಗಳ ವಾಗ್ಯುದ್ಧದಲಿ ಜಯಿಸುತಲಿ । ಶ್ರೇಷ್ಠ ಗ್ರಂಥವ ಬರೆದು ಬರೆದು ಸಾಕಾಯ್ತೆ ॥ ೨ ॥

ಪರಿ ಪರಿ ಅಭೀಷ್ಟಗಳ ನೀಡೆಂದು ಜನಕಾಡೆ । ವರವಿತ್ತು ಸಾಕಾಯ್ತೆ ಕಮಲೇಶ ದಾಸಾ ॥
ಧರೆಗೆ ಮರೆಯಾಗಿ ಬೃಂದಾವನವ ಸೇರಿದೊಡೆ । ಚರಣ ದಾಸರು ನಿನ್ನ ಬಿಡುವರೇನಯ್ಯಾ ॥ ೩ ॥

## ತೂಗೀರೆ ರಾಯರ - ಗುರುಜಗನ್ನಾಥವಿಠಲ

ರಾಗ : ನಾಟಿ ಛಾಪುತಾಳ

ತೂಗಿರೆ ರಾಯರ ತೂಗಿರೆ ಗುರುಗಳಾ । ತೂಗಿರೆ ಯತಿಕುಲ ತಿಲಕಾರಾ ॥
ತೂಗಿರೆ ಯೋಗೀಂದ್ರ ಕರಕಮಲ ಪೂಜ್ಯರಾ । ತೂಗಿರೆ ಗುರುರಾಘವೇಂದ್ರರಾ ॥ ಪ ॥

ಕುಂದಣ ಮಯವಾದ ಬಾನತೊಟ್ಟಿಲೊಳು । ಅಂದಾದಿ ಮಲಗ್ಯಾರೆ ತೂಗೀರೇ ॥
ನಂದನ ಕಂದ ಗೋವಿಂದ ಮುಕುಂದನ । ಅಂದದಿ ಭಜಿಪಾರ ತೂಗೀರೇ ॥ ೧ ॥

ಯೋಗನಿದ್ರೆಯನ್ನು ಬೇಗನೆ ಮಾಡುವ । ಯೋಗೀಶ ವಂದ್ಯಾರ ತೂಗೀರೇ ॥
ಭೋಗಿಶಯನಪಾದಯೋಗ ಭಜಿಪರ । ಭಾಗವತರನ್ನ ತೂಗೀರೇ ॥ ೨ ॥

ನೇಮದಿ ತಾನೇನು ಕಾಮಿಪ ಜನರಿಗೆ । ಕಾಮಿತ ಕೊಡುವವರ ತೂಗೀರೇ ॥
ಪ್ರೇಮದಿ ನಿಜಜನರ ಆಮಯವನ್ । ಕುಲಧೂಪಕೇತೆನಿಪರನ ತೂಗೀರೇ ॥ ೩ ॥

ಅದ್ವೈತಮತದ ವಿಧ್ವಂಸನ ನಿಜಗುರು । ಮಧ್ವಮತೋದ್ಧರನ ತೂಗೀರೇ ॥
ಶುದ್ಧ ಸಂಕಲ್ಪದಿ ಬದ್ಧ ನಿಜಭಕ್ತರ ಉದ್ಧಾರಮಾಳ್ಪರ ತೂಗೀರೇ ॥ ೪ ॥

ಭಜಕಜನರ ಭವತ್ಯಜನೆ ಮಾಡಿಸಿ ಅವರ ನಿಜಗತಿಯಿಪ್ಪರ ತೂಗೀರೇ ॥
ನಿಜಗುರು ಜಗನ್ನಾಥ ವಿಠಲನ ಪದಕಂಜ । ಭಜನೆಯಮಾಳ್ಪರ ತೂಗೀರೇ ॥ ೫ ॥

## ಕಾಯೋ ಗುರುರಾಘವೇಂದ್ರ - ಅಭಿನವಜನಾರ್ದನವಿಠಲ

ರಾಗ : ಆರಭಿ ಝಂಪೆತಾಳ

ಕಾಯೋ ಗುರುರಾಘವೇಂದ್ರ । ನಮ್ಮನ್ನ ।
ರಾಘವೇಂದ್ರ ಗುರುವೆ ಗತಿಯೊ ಭವ–
ರೋಗ ಬ್ಯಾಗ ಕಳೆದೀಗ ಯೋಗಿವರ ॥ ೧ ॥

ನಿನದಾಸ ನಾ ಅನ್ಯನಲ್ಲವೊ ।
ಘನ್ನ ಬನ್ನ ಬಿಡಿಸೆನ್ನನು ಮನ್ನಿಸಿ ॥ ೨ ॥

ಅಭಿನವ ಜನಾರ್ದನ ವಿಠಲನ ಪ್ರಿಯ ।
ಶುಭಕರ ಪ್ರಭು ನೀ ಪ್ರಬಲ ಅಬಲ ನಾ ॥ ೩ ॥

## ರಾಘವೇಂದ್ರ ಪರಾಕು - ಪ್ರಾಣೇಶವಿಠಲ

ರಾಗ : ಪೂರ್ವಿ ಆದಿತಾಳ

ರಾಘವೇಂದ್ರ ಪರಾಕು । ಪರಾಕು ॥ ಪ ॥
ಪರಿಮಳ ವಿರಚಿಸಿದವನೆ ಪರಾಕು ॥ ಅ । ಪ ॥

ಧರೆಯೊಳು ಮಂತ್ರನಿಲಯನೆ ಪರಾಕು । ಗುರುಸುಧೀಂದ್ರರ ಕುವರ ಪರಾಕು ॥ ೧ ॥
ಆ ಸೇತು ಹೇಮಾದ್ರಿ ಮೆರೆವ ಪರಾಕು । ದೇಶಿಕ ಶ್ರೇಷ್ಠ ನಿರ್ದುಷ್ಟ ಪರಾಕು ॥ ೨ ॥
ಶ್ರೀಶ ಪ್ರಾಣೇಶ ವಿಠ್ಠಲನೆ ಪರಾಕೆಂದು । ಆಸೆಯಿಂದ ನೀ ಭಜಿಪೆ ಪರಾಕು ॥ ೩ ॥

## ರಾಘವೇಂದ್ರ ನಿಮ್ಮ ಪಾದಸರಸಿಜಕೆ - ಪ್ರಾಣೇಶವಿಠಲ

ರಾಗ : ಕಲ್ಯಾಣಿ ಆದಿತಾಳ

ರಾಘವೇಂದ್ರ ನಿಮ್ಮ ಪಾದಸರಸಿಜಕೆ । ಬಾಗುವೆ ಮನ್ಮನದ್ವರಕೆ ಪೂರೈಸೋ ॥ ಪ ॥

ವಾಸುದೇವಾರ್ಚಕ ಭೂಸುರವಂದಿತ । ದೋಷವ ಕಳೆವುದು ದೇಶಿಕವರ್ಯ ॥ ೧ ॥
ಅಂಗಜಶರದೂರ ಮಂಗಳ ವಿಗ್ರಹ । ತುಂಗಾತೀರವಾಸ ಪಿಂಗಳತೇಜ ॥ ೨ ॥
ಸಾರುವಭಕ್ತರ ಘೋರಿಸುತಿಪ್ಪ ಸಂ– । ಸಾರಕಡಲಿಗೆ ಕರೀರಸಂಭವನೇ ॥ ೩ ॥
ತಂದೆಪಾಲಿಸು ದಯಾಸಿಂಧು ಜಗದ್ಗುರು । ಮಂದಮತಿಗಳೆಂಬ ಇಂಧನಕನಲಾ ॥ ೪ ॥
ವಟುವಪುಪ್ರಾಣೇಶ ವಿಠಲನದೂತಾ । ಸಟೆಯಲ್ಲ ಸಂಸಾರ ಕಟಕಟ ಬಿಡಿಸೊ ॥ ೫ ॥

## ಧರೆಯೊಳಗೆ ನಮ್ಮ ಗುರುರಾಘವೇಂದ್ರ(ಸುಳಾದಿ) - ಗೋಪಾಲದಾಸರು

ರಾಗ : ಧ್ರುವತಾಳ

ಧರೆಯೊಳಗೆ ನಮ್ಮ ಗುರುರಾಘವೇಂದ್ರರಿನ್ನು । ಇರುತಿಪ್ಪ ವಿವರವ ಅರಿತಿಷ್ಟು ವರ್ಣಿಸುವೆ ।
ಸ್ಥಿರವಾಗಿ ಮಂತ್ರಾಲಯ ಪುರತುಂಗಾತೀರದಿ । ಹರಿಭಕ್ತಿ ಪ್ರಹ್ಲಾದ ವರಯಾಗ ಇಲ್ಲಿ ಮಾಡಿ ।
ಸುರರಿಗಮೃತ ಉಣಿಸಿ ॥

ಪರಿಪರಿ ಕ್ರಿಯೆ ಮಾಡಿ । ಪರಿಶುದ್ಧ ಆದೆನೆಂದು ಅರಿತು ಈ ಸ್ಥಳದಲ್ಲಿ ಗುರು ರಾಘವೇಂದ್ರರಾಯ ಶರೀರ
ಪೋಗಾಡಿಸಿಲ್ಲಿ ಪರಲೋಕ ಸಾಧನ ಪರಿಪೂರ್ತಿ ಮಾಡಿಕೊಂಡು ಸಿರಿಕೃಷ್ಣ ಚರಣಕ್ಕೆರಗಿ ಸಂತೋಷದಲ್ಲಿ
ಧರೆಯಮೇಲಿದ್ದ ಜನರ ಪೊರೆಯಬೇಕೆಂದನಲು । ಹರಿ ನೋಡಿದನಿವರ ಪರಮ ದಯಾಳು ತನವ ।
ಗುರುವಂತರ್ಯಾಮಿಯಾಗಿ ವರವ ನೀಡಲು ಜಗಕೆ ನರಹರಿ ತಾನೆ ನಿಂತು ನಿರುತ ಪೂಜೆಯಗೊಂಡು ।
ಸಿರಿಯುಳ್ಳ ಕೀರುತಿಯ ಸುರರ ಪಾಲಕ ಚಕ್ರಧರ ನಾರಾಯಣ ತಾನಿವರ ಸನ್ನಿಧಾನವಾಗಿ-।
ವರಿಗೆ ಫಲತಂದೀವ ಇಹಪರದಲ್ಲಿ ಇನ್ನೂ । ಕರುಣಾಕರ ಗೋಪಾಲವಿಠಲ ತನ್ನ ।
ಶರಣರ ಪೊರೆವಂಥ ಚರಿಯ ಪರಿಪರಿ ಉಂಟು ॥ ೧ ॥

ರಾಗ : ಮಠ್ಯತಾಳ

ನರಹರಿ ಕೃಷ್ಣರಾಮ ಸಿರಿ ವೇದವ್ಯಾಸ । ಎರಡೆರಡು ನಾಲಕು ಹರಿ ಮೂರುತಿಗಳು ।
ಪರಿವಾರ ಸಹಿತಾಗಿ ಸಿರಿಸಹಿತ ನಿಂದು । ಸುರಗುರುಮಧ್ವಾಚಾರ್ಯರೆ ಮೊದಲಾಗಿ ।
ತರುವಾಯದಲ್ಲಿನ್ನು ತಾರತಮ್ಯಾನುಸಾರ । ಪರಿ ಪರಿ ಯತಿಗಳು ಇರುತಿಪ್ಪರಿಲಿ ।
ಹರುಷದಿಂದಲಿ ವೇದವೊರೆದು ಶಾಸ್ತ್ರಗಳನ್ನು ಪರಿಪರಿ ಪುರಾಣ ಭಾರತಾಗಮದಲಿ ।
ಸರಿಸರಿ ಬಂದಂತೆ ಸರಿಗಮವೆನುತಲಿ ಭರದಿಂದಲಿ ಕುಣಿದು ಭಕುತಿಯಿಂದಲಿ ಇನ್ನು ।
ಹರಿಯನ್ನು ಪೂಜಿಸುತ ಇರುಳು ಹಗಲು ಬಿಡದೆ । ಪರಿಪರಿ ವಿವರವ ಪರಿಪರಿ ಕೇಳ್ವರು ।
ಗರುಡವಾಹನ ರಂಗ ಗೋಪಾಲವಿಠಲನು ತನ್ನ ಶಾರಣರ ಪಾಲಿಸುತಿರುಪ್ಪನಿಲ್ಲಿ ॥ ೨ ॥

ರಾಗ : ತ್ರಿಪುಟತಾಳ

ನರಹರಿರೂಪನಾಗಿ ವಾಸವಾಗಿ ಇಲ್ಲಿ । ದುರಿತ ದುಷ್ಕೃತ ಬ್ರಹ್ಮತ್ಯಗಳ ದೂರೋಡಿಸುವ ।
ಸಿರಿರಮನಾಗಿ ವಾಸವಾಗಿ ಇಲ್ಲಿ । ಪರಿಪರಿಯಿಂದ ದೇಶಾಂತರ ಅನ್ನ ಕಳಕೊಂಡು ।
ನರರಿಲ್ಲಿ ಬಂದರೆ ಸ್ಥಿರಪಟ್ಟುಗುಟ್ಟುವ । ಸಿರಿ ಕೃಷ್ಣನಾಗಿ ವಾಸವಾಗಿ ಇಲ್ಲಿ ।
ಪರಿಪರಿಯಲಿ ಬಂದ ಪರಮಾತುರರಿಗೆ । ವರವೀವ ಪುತ್ರೋತ್ಸವ ಮದುವೆ ಮುಂಜಿ ।
ಹರಕೆಗಳ ಕೈಕೊಂಡು ಹರುಷವಡಿಸುವ । ವರ ವೇದವ್ಯಾಸನಾಗಿ ಇಲ್ಲಿ ।
ಭರದಿಂದ ಬಂದ ದುರ್ವಾದಿಗಳನ್ನೆಲ್ಲ । ದೂರ ಓಡಿಸಿ ಮುರಿದು ಅವರ ಕುಶಾಸ್ತ್ರವ ।
ಹರಿ ಸರ್ವೋತ್ತಮನೆಂದು ಇರುವನಿಲ್ಲಿ ತೋರಿ ಶಾರಣಜನಕೆ ಇನ್ನು ವರಜ್ಞಾನ ಸುಧೆಯ
ಕರೆದುಕೊಡುತಲಿ ಇರುತಿಪ್ಪವನಿಲ್ಲಿ ।
ಸಿರಿವಂದಿತ ಪೊದ ಗೋಪಾಲವಿಠಲ ಪರಿಪರಿಯಿಂದ ವಾಲಗ ಕೈಕೊಳುತಿಪ್ಪ ॥ ೩ ॥

ರಾಗ : ಅಟತಾಳ

ರಾಘವೇಂದ್ರನೆಂಬ ರೂಪ ತಾನೆಯಾಗಿ । ರಾಘವೇಂದ್ರನೆಂಬ ನಾಮವಿಡಿಸಿಕೊಂಡು ।
ರಾಘವೇಂದ್ರರನ್ನು ಮಾಡಿದಂಥ ಪುಣ್ಯ । ಭೋಗವರಿತುನ್ನ ಭಾಗವತರ ಕೀರ್ತಿ ।
ಸಾಗಿಸಿ ಸಲುಹಲು ಜಗದೊಳಗೆಲ್ಲ । ಮೇಘಾಸೂರ್ಯನಂತೆ ಅಮೋಘ ಕೀರುತಿಯನ್ನು ।
ರಾಘವ ಇವರಿಗೆ ರಾಜ್ಯವ ತಂದೀವ । ರಾಘವೇಂದ್ರಮೂರ್ತಿ ಗೋಪಾಲವಿಠಲ ।

ಭಾಗವತರಲ್ಲಿ ಬಹುಪೂಜೆಯನುಕೊಂಬ ॥ ೪ ॥

ರಾಗ : ಆದಿತಾಳ

ದಿನದಿನಕಿಲ್ಲಿ ನೂತನ ಪೂಜೆಗಳಾಗುವುವು । ದಿನದಿನಕಿಲ್ಲಿ ನೂತನ ಉತ್ಸವಗಳಾಗುವುವು ।
ದಿನದಿನಕಿಲ್ಲಿ ನೂತನ ವಾರ್ತೆಗಳಾಗುವುವು । ಜನರ ಸಂದಣಿ ಪ್ರತಿದಿನ ವಿಪ್ರಭೋಜನ ।
ಜನರ ಕೈಯಿಂದ ಪ್ರತಿ ಜನರೀಪ್ಸಿತ ತುಂಬುವರು । ಜನುಮ ಸಫಲ ತಮ್ಮ ಜನನವ ನೀಗುವರು ।
ದಿನ ಸಪ್ತಶತವರುಷ ದಿನಪರಿಯಂತರ । ದಿನಕರ ಶತತೇಜ ಜಗನ್ನಾಥ ತಾನಿಲ್ಲಿ ಅನುವಾಗಿ ತಾನಿಂದು
ಜನರ ಪಾಲಿಪುದ । ಕ್ಕನುಮಾನ ಸಲ್ಲದು ಗುಣಗಣ ಪರಿಪೂರ್ಣ ಗೋಪಾಲವಿಠಲನ ಅಣೋ ।
ರಣೀಯ ಎಂಬುವಗೆ ಎಣೆ ಯಾರೋ ಜಗದೊಳಗೆ ॥ ೫ ॥

ಮಂತ್ರಸಿದ್ಧಿಯ ಕ್ಷೇತ್ರ ಇದ ನೋಡಿ ಕೋವಿದಿರು । ಮಂತ್ರಪ್ರತಿಪಾದ್ಯ ಗೋಪಾಲವಿಠಲನಿಂದ ॥ ೬ ॥

## ಮಂತ್ರಾಲಯ ನಿವಾಸ - ವಿಜಯವಿಠಲ

ರಾಗ : ಕಾಂಬೋದಿ ಝಂಪೆತಾಳ

ಮಂತ್ರಾಲಯ ನಿವಾಸ ಉತ್ತಮ ಹಂಸ । ಸಂತಾಪ ಪರಿಹರಿಸಿ ಕೊಡು ಎನಗೆ ಲೇಸ ॥ ಪ ॥

ಯತಿಗಳ ಶಿರೋರನ್ನ ಯೋಗ ಸಂಪನ್ನ । ಕ್ಷಿತಿಯೊಳಗೆ ನಿನಗೆ ಸರಿಗಾಣೆನೊ ॥
ನುತಿಸುವೆನು ಭಕ್ತಿಯಲಿ ಬಿಡದೆ । ಮುಕುತಿಯಲಿ ಸತತಾನಂದದಲಿಪ್ಪ ಜ್ಞಾನವಿರಲಿ ತಪ್ಪ ॥ ೧ ॥

ಕಪಿಲತೀರ್ಥದಲಿ ಕರಣಶುದ್ಧಿಯಲ್ಲಿ । ತಪವ ಮಾಡುವ ಮೌನಿ ಸೌಮ್ಯ ಜ್ಞಾನಿ ॥
ಜಪಶೀಲಾ ಗುಣಾಂಬುಧಿ ಪುಣ್ಯದ ಬುದ್ಧಿ । ಕೃಪೆ ಮಾಡಿ ಕೊಡುವೆ ಗುರುವೆ ಶಿಷ್ಯ ಸುರತರುವೆ ॥ ೨ ॥

ತಮೋಗುಣ ಕಾರ್ಯ ಪೋಗಲಾಡು ವ್ಯಾಪ್ತಿಯಾ । ಶಮೆ ದಮೆಯಲಿ ಉಳ್ಳ ಮಹಿಮೆಯಾ ॥
ನಮಗೆ ಪೇಳುವ ವೇದ ಬಲ್ಲ ವಿನೋದ । ಸುಮನ ಸುಗುಣವ ಮೆಚ್ಚಿ ದುರ್ಮತಕೆ ಕಿಚ್ಚ ॥ ೩ ॥

ಕಾಶಿ ಸೇತುವೆ ಮಧ್ಯ ಮೆರೆವ ಭೇದ ವಿ । ದ್ಯ ಸಜ್ಜನಕೆ ತಿಳುಪೆ ಮನಸು ನಿಲಿಪೆ ॥
ಪೋಷಿಸುವೆ ಅವರ ಅಟ್ಟುವ ಮಹದುರ । ದೋಷವ ಕಳೆವಂಥ ವಿಮಲಖಲಶಾಂತ ॥ ೪ ॥

ವರಹಜ ತೀರದಲ್ಲಿದ್ದ ಸುಪ್ರಸಿದ್ಧ । ಮರುತಮತಾಂಬುಧಿಸೋಮ ನಿಸ್ಸೀಮ ॥
ಸರಸಿಜಪತಿ ನಮ್ಮ ವಿಜಯವಿಠ್ಥಲನಂಘ್ರಿ । ಸ್ಮರಿಸುವ ಸುಧೀಂದ್ರಸುತ ರಾಘವೇಂದ್ರ ॥ ೫ ॥

## ಪರಮ ಮಂಗಳ ಮೂರುತಿ - ವಿಜಯವಿಠಲ

ರಾಗ : ಸೌರಾಷ್ಟ್ರ ತ್ರಿಪುಟತಾಳ

ಪರಮಮಂಗಳ ಮೂರುತಿ ದಿವ್ಯಕೀರುತಿ । ಧರೆಯೊಳಗಿದೇ ವಾರುತಿ ॥ ಪ ॥
ಕರುಣಾಪಯೋನಿಧಿಯೆ ಕರವಪಿಡಿದು ಎನ್ನ । ಕರಣಶುದ್ಧನ ಮಾಡೊ ಕರೆವೆ ಮಸ್ತಕ ಬಾಗಿ ॥ ೧ ॥

ರಾಘವೇಂದ್ರರಪಾದ ಲಾಘವಮತಿಯಲ್ಲಿ । ಶ್ಲಾಘನ ಮಾಡಿದ ಮಾಗಧಾರಿಯಪ್ರೀಯ ॥ ೨ ॥
ನಿರುತ ಮಂತ್ರಾಲಯ ಪುರವಾಸ ಅಘನಾಶ । ಸಿರಿ ವಿಜಯವಿಠ್ಠಲನ್ನ ಚರಣ ಭಜಿಪಗುರುವೆ ॥ ೩ ॥

## ಮುನಿಯ ನೋಡಿರೊ - ಗೋಪಾಲವಿಠಲ

ರಾಗ : ಮುಖಾರಿ ಏಕತಾಳ

ಮುನಿಯ ನೋಡಿರೊ ಮುಕುತಿಧನವ ಬೇಡಿರೊ ।
ಜನುಮರಹಿತವಾಗಿ ನಿಂದು ಘನವರವೀವ ರಾಘವೇಂದ್ರ ॥ ಪ ॥
ಸಂತರಗೂಡಿ ಸಕಲಚಿಂತೆಯ ಬಿಡಿ ಕು । ಪಂಥವ ಸುಡಿ ನಾನೆಂತೆಂಬೋದು ಬಿಡಿ ॥
ಅಂತರಂಗದಿ ಅಲ್ಲಿ ಹರಿಯಾ । ಚಿಂತೀಸೇಕಚಿತ್ತದಲಿ ॥ ೧ ॥
ಗೋಳಕತ್ರಯಾ ಇನ್ನು ಕೇಳು ನಿರ್ಣಯಾ । ಆಲೋಚನಯಾ ಅಲ್ಲಿ ಶೀಲಮೂರ್ತಿಯಾ ॥
ಆಳುಸಹಿತ ಇಪ್ಪನಲ್ಲಿ ಬಹಳ । ಫಲನೀವುತಲೀ ॥ ೨ ॥
ಮಂದಜನರನು ಪೊರೆಯಲ್ಲಿನ್ನು । ಒಂದು ರೂಪದಿ ಬಂದು ಹರಿಯು ತಾನಿಲ್ಲಿ ನಿಂದು ॥
ಒಂದುರೂಪದಿ ಸುಂದರಾಂಗ ಗೋಪಾಲವಿಠ್ಠಲ । ತಂದು ಫಲವನೀವುತಿಪ್ಪ ॥ ೩ ॥

## ವಂದಿಸಿ ನೋಡುವ ಬಾರೆ - ಗೋಪಾಲವಿಠಲ

ರಾಗ : ಮೋಹನ ತ್ರಿವಿಡಿತಾಳ

ವಂದಿಸಿ ನೋಡುವ ಬಾರೆ ।
ಇಂದುಮುಖಿಯಳೆ ರಾಘ ।
ವೇಂದ್ರ ವೃಂದಾವನವನು ।
ಹಿಂದೆ ಮಾಡಿದ ಸುಕೃತದಿಂದ ಹರಿ ಇವರಲ್ಲಿ ।
ನಿಂದು ತಾ ಪೂಜೆಯಗೊಂಬುವ ॥ ಪ ॥

ಬಹು ಜನುಮಗಳಲ್ಲಿ ಅಹಿಶಾಯಿ ಇವರಿಂದ ।
ರಹಸ್ಯ ಅರ್ಚನೆಯ ಕೊಂಡು ।
ಇಹಲೋಕದಲ್ಲಿ ಇವರ ಮಹಿಮೆ ವ್ಯಕುತಮಾಡಿ ।
ಸಹಕಾರಿಗಳು ಸರ್ವರ ಸಹಿತ ಒಂದಂಶದಿ ।
ಶ್ರೀಹರಿ ತಾನಿಲ್ಲಿ ನಿಂದು ಇಹಪರ ಫಲಗಳನ್ನು ।
ಪಾಹಿ ನಮೋ ಎಂದು ಬಂದು ।
ದೇಹಿ ಎಂದವರಿಗಿನ್ನು ವಹಿಸಿ ವರಗಳ ನೀಡುವ ॥ ೧ ॥

ನರಹರಿರೂಪ ತಾನಾಗಿ ಪರಿಪರಿಯಲಿ ಬಂದಂಥ ।
ದುರಿತ ಬ್ರಹ್ಮೇತಿಗಳು ದುಷ್ಟ ।
ಕರೆಕರೆ ರಾಕ್ಷಸ ಬ್ರಹ್ಮ ಪಿರಿದು ದಣಿವೊ ಅವನೆಲ್ಲ ।
ದೂರದಿ ಓಡಿಸುವೆ ಬಿಡದೆ ಸಿರಿರಾಮ ರೂಪಾಗಿ ಅನ್ನ ।

ದೊರೆಯದೆ ಬಂದವರಿಗೆ ಸ್ಥಿರವಾಗಿ ಪಟ್ಟಗಟ್ಟುವ ।
ಹರಕೆಗಳು ಶುಭ ಉಚ್ಚ ।
ವರ ಸಂಧಾನ ವೈಭೋಗವು ಸಿರಿಕೃಷ್ಣ  ತಾನಾಗಿ ನೀಡುವ ॥ ೨ ॥

ವ್ಯಾಸರೂಪನಾಗಿ ಇಲ್ಲಿ ವಾಸವಾಗಿ ಬಂದ ಬಂದ ।
ದಾಸಜನರ ಅಜ್ಞಾನವ ಲೇಶವಿಡದೆ ವಕ್ರವು ।
ದೋಷಗಳ ತರಿದು ಉಪದೇಶಮಾಡುವನು ಸುತತ್ವ ।
ಶೇಷಾಂಶ ಪ್ರಹ್ಲಾದ ವ್ಯಾಸಮುನಿಯೆ ರಾಘವೇಂದ್ರ ।
ಈಸುಬಗೆ ಪುಣ್ಯ ಇವರಿಗೆ ಕೇಶವನೆ ತಾ ಮಾಡಿಸಿ ।
ಈ ಸುಖ ಇಹಪರದಲ್ಲಿ ಶಾಶ್ವತವಾಗಿತ್ತು ಸಲಹುವ ॥ ೩ ॥

ಅನಿರುದ್ಧ ನಾಲ್ಕು ಮೂರ್ತಿ ಘನವಾಗಿ ತಾನಿದ್ದು ಪ್ರತಿ ।
ದಿನದಿನಕತಿಶಯವಾಗಿ ।
ದಿನಕರನಂತೆ ಸರ್ವತ್ರ ಮನೆಮನೆಯಲ್ಲಿ ತಾವಿದ್ದು ।
ಅನುವಾಗಿ ಪೂಜೆಯಗೊಂಬರು ।
ಕನಸುಜಾಗ್ರದಿ ಬಂದು ಎಳ್ಳನಿತು ಪೂಜೆ ತಪ್ಪಿದರೆ ।
ದಣಿಸಿ ದಂಡಿಸಿ ಮಾಡಿಪ್ಪರು ಜನರು ಮಾಡಿದ ಸುಕೃತ ।
ಅನುಕೂಲ ಒದಗಿತು ಮುನಿಯ ಪುಣ್ಯವನು ಏನೆಂಬೆ ॥ ೪ ॥

ಆವತೀರ್ಥದಲಿ ಪೋಗಿ ಸೇವಿಸಿ ಬಂದುದಕಿಂತ ।
ತಾವಧಿಕವಾಗಿ ಫಲವ ।
ಈವಾನು ಶ್ರೀಹರಿ ಲಕುಮಿದೇವಿ ಸಹಿತ ಇದ್ದು ।
ಕೋವಿದರಿಗಿನ್ನು ಬಿಡದೆ ಪಾವನಮಂಗಳಕ್ಷೇತ್ರ ।
ಆವಾವ ವರ್ಣಿಪ ಮತ್ತೆ ಭುವನದೊಳಗೆ ಮಹಿಮೆಯ ।
ದೇವದೇವೇಶ ಕೃಷ್ಣಗೋಪಾಲವಿಠ್ಠಲ ಇಲ್ಲಿ ।
ಆವಾಗ ಸೇವಿಸಿಕೊಳುತಿಪ್ಪ ॥ ೫ ॥

## ಶರಣು ಶರಣು ರಾಘವೇಂದ್ರ - ಗುರುಗೋಪಾಲವಿಠಲ

ರಾಗ : ನೀಲಾಂಬರಿ  ತ್ರಿವಿಡಿತಾಳ

ಶರಣು ಶರಣು ರಾಘವೇಂದ್ರ ಗುರುರಾಯಾ । ಶರಣು ಶರಣು ಕವಿಗೇಯ ॥
ಶರಣು ಮಾರುತಮತಶರಧಿ ಅತ್ರಿತನಯ । ಧರಣಿ ವಿಬುಧ ಜನಪ್ರೀಯಾ ॥ ಪ ॥

ಅನಾದಿಕಾಲದಿ ಎನಗೆ ಶ್ರೀಹರಿ ತಾನು । ನಾನಾ ದೇಹ ದೇಶ ಕಾಲದಲಿ ।
ತಾನೆ ಇಚ್ಛಿಸಿ ಮಾಡಿದ ಮರಿಯಾದಿಯು । ನಾನರಿತವನಲ್ಲ ಗುರುವೆ ।
ಏನೇನು ವಿಘ್ನಗಳುಂಟು ಪರಿಹರಿಸಿ । ನೀನೆ ಪಾಲಿಸಬೇಕು ಕರುಣಿ ॥ ೧ ॥

ಹಸ್ತಿಮಜ್ಜನದಂತೆ ಕರ್ಮಾದಿ ಕರ್ಮನಿ । ರಸ್ತವಾದುದು ಅಬಲರಿಗೆ ।
ಗ್ರಸ್ತವಾಗಿದೆ ಮನ ವಿಷಯದಿ ಮೊದಲಿಂದು । ದುಸ್ತರವವನಿಗೆ ಗೆಲಲೊಶವೆ ।
ವಿಸ್ತಾರಮಹಿಮ ನೀನೊಲಿದು ಕರಿಣಿಸಲು । ದುಸ್ತರವೆಲ್ಲ ಸುಲಭವ್ರೋ ।
ಹಸ್ತಿ ವರದನಂಘ್ರಿಯಲಿ ಭಕ್ತಿಯನಿತ್ತು । ಸ್ವಸ್ಥಚಿತ್ತನ ಮಾಡೊ ಕರುಣಿ ॥ ೨ ॥

ಗುರುವೆ ಕಾಮಿತ ಕಲ್ಪತರುವೆ ತ್ರಿಕಾಲಜ್ಞ । ವರಯೋಗಿ ಅನಘ ನಿಸ್ಸಂಗ ।
ದುರಿತ ಅಕಾಲಮೃತ್ಯುವಿನ ಗಂಟಲಗಾಣ । ಪರಮಹಂಸರ ಕುಲತಿಲಕ ।
ಮರುತಾಂತರ್ಗತ ಗುರುಗೋಪಾಲವಿಠ್ಠಲನ್ನ । ಸರುವಸ್ಥಾನದಿ ಸಮದರ್ಶಿ ।
ಕರವಮುಗಿದು ಬಿನ್ನೈಸುವೆ ಲಾಲಿಸಿ ವೇಗದಿ । ಪೊರೆವಭಾರ ನಿನ್ನದೊ ಕರುಣಿ ॥ ೩ ॥

## ನಾನ್ಯಾಕೆ ಚಿಂತಿಸಲಿ - ವಾಸುದೇವವಿಠಲ

ರಾಗ : ಕಾಂಬೋಧಿ ಝಂಪೆತಾಳ

ನಾನ್ಯಾಕೆ ಚಿಂತಿಸಲಿ ನಾನ್ಯಾಕೆ ಧೇನಿಸಲಿ । ತಾನಾಗಿ ಶ್ರೀರಾಘವೇಂದ್ರಯತಿ ಒಲಿದ ॥ ಪ ॥

ಪೋರತನದವನು ಎರಡು ಥೆರೆಗಳಲಿ । ದೂರಾಗಿ ಮೊರೆಯು ಅಲ್ಲವೆಂದು ।
ಕಾರುಣ್ಯದಿಂದ ತಮ್ಮಯ ಗುರುತುಗಳ ತೋರಿ । ಧೀರ ತಾ ಕರವನ್ನು ಪಿಡಿದ ಬಳಿಕಾ ॥ ೧ ॥

ಜಗದೊಳಗೆ ಪದಾರ್ಥಗಳು ಗುಣದಿ ಭುಂಜಿಸುವಂಗೆ । ಆಗದಂಕರನು ತಾನು ಬಳಿಗೆ ಬಂದು ।
ಬಗೆ ಬಗೆಯಿಂದಲ್ಲಿ ಸುರಸಪದಾರ್ಥಗಳು । ಸೊಗಸಾಗಿ ಉಣಿಸಲು ಚಿಂತೆಯುಂಟೆ ॥ ೨ ॥

ಪೂರ್ಣಜಲ ಹರಿವ ವಾಹಿನಿ ಕಂಡು ಬೆದರುವಗೆ । ಕರಣಧಾರನು ತಾನೆ ಬಂದು ನಿಂದು ।
ತೂರ್ಣದಲಿ ಕರಪಿಡಿದು ಹರಿಗೋಲು ಒಳಗಿಟ್ಟು । ಘೂರ್ಣಿಸಲು ಅವನಿಗೆ ಚಿಂತೆಯುಂಟೆ ॥ ೩ ॥

ತನ್ನಯ ಹಿತವು ತಾ ವಿಚಾರಿಸಲವಂಗೆ । ಚೆನ್ನಾಗಿ ಪರಮಗುರು ತಾನೆ ಬಂದು ।
ಸನ್ಮಾರ್ಗವನು ತಾನೆ ಪೇಳುವೆನೆನಲು । ಇನ್ನು ಆಯಾಸ ಉಂಟೆ ॥ ೪ ॥

ಏಸು ಜನ್ಮದಲಿ ಅರ್ಚಿಸಿದೆನೋ ನಾ ಇನ್ನು । ವಾಸಿದೇವವಿಠ್ಠಲ ಪಾದಪದುಮ ।
ಲೇಸಾಗಿ ಈ ಸುಕೃತದಿಂದೆನ್ನ ಹರಿದಾಸ । ಈ ಸುಗುಣ ಗುರುರಾಯ ಎನಗೆ ಒಲಿದ ॥ ೫ ॥

## ಏಳು ಶ್ರೀಗುರುರಾಯ - ಪ್ರಸನ್ನವೆಂಕಟ

ರಾಗ : ಭೂಪಾಳಿ ಝಂಪೆತಾಳ

ಏಳು ಶ್ರೀಗುರುರಾಯ ಬೆಳಗಾಯಿತಿಂದು । ಧೂಳಿದರುಶನವ ಕೊಡಿರಿ ಈ ವೇಳೆ ಶಿಷ್ಯರಿಗೆ ॥ ಪ ॥
ಏಳು ಗುರುರಾಘವೇಂದ್ರ ಏಳು ದಯಾಗುಣಸಾಂದ್ರ ।

ಏಳು ವೈಷ್ಣವ ಕುಮುದಕೆ ಚಂದ್ರ ಶ್ರೀ ರಾಘವೇಂದ್ರ ॥ ಅ । ಪ ॥

ಅಶನವಸನಗಳಿಲ್ಲವೆಂಬ ವ್ಯಸನಗಳಿಲ್ಲ । ಮುಸುಕ್ಹಾಕಿ ಮೋಸದೆಲೆ ಮೋಹಿಸಿದೆನಲ್ಲ ।
ಅಸುರಾರಿಯ ಸ್ಮರಿಸದೆ ಪಶುವಿನವೊಲು ಈ ದೇಹ । ವಸುಮತಿಯೊಳು ಬಹಳ್ಹಸಗೆಟ್ಟಿತಲ್ಲ ॥ ೧ ॥

ನಾನು ನನ್ನದು ಎಂದು ಹೀನ ಮನಸಿಗೆ ತಂದು । ಏನು ಮಾಡುವ ಕರ್ಮ ನಾನೇ ಅಹುದೆಂದು ।
ಸ್ವಾಮಿ ಕರ್ತುತ್ವವನು ತಿಳಿಯಲಿಲ್ಲ ನಾನೆಂದು । ನೀನೇ ಉದ್ಧರಿಸಯ್ಯ ದೀನದಯಾಸಿಂಧೋ ॥ ೨ ॥

ಅನ್ಯರಕೈಯಲಿ ನಿನ್ನವರನಿರಿಸುವುದು । ಅನ್ಯಾಯವಾಯ್ತು ಪಾವನ್ನ ಗುರುರಾಯ ।
ಎನ್ನಮಾತಲ್ಲವಿದು ನಿನ್ನ ಮಾತೇ ಸರಿ । ಮನ್ನಿಸಿ ಸಲಹು ಪ್ರಸನ್ನ ಗುರುರಾಯ ॥ ೩ ॥

ವೇದಶಾಸ್ತ್ರಗಳನು ಓದಿ ಪೇಳ್ದವನಲ್ಲ । ಭೇದಾಭೇದವನು ತಿಳಿಯಲಿಲ್ಲ ॥
ಸಾಧುಸಜ್ಜನ ಸಹವಾಸ ಮೊದಲಿಲ್ಲ । ಹೀನಾಗಿ ಮಾನ ಮಾರಿಸಿದಿ ಉಳಿಸಲಿಲ್ಲ ॥ ೪ ॥

ಆಶೆಗೊಳಗಾದೆನೊ ಹೇಸಿ ಮನುಜನು ನಾನು । ಕ್ಲೇಶ ಭವಸಾಗರದೊಳಗೀಸುತಿಹೆನೊ ।
ಏಸುಜನ್ಮದಿ ಎನ್ನಗಾಸಿ ಮಾಡಿದಿ ಮುನ್ನ । ದಾಸನಾಗುವೆ ತೋರೊ ಪ್ರಸನ್ನವೆಂಕಟನ ॥ ೫ ॥

## ತುಂಗಾತೀರದಿ ರಾಜಿಪ ಯತಿಯಾ - ಅಭಿನವಜನಾರ್ದನವಿಠಲ

ರಾಗ : ಮಾಂಡ್ ಆದಿತಾಳ

ತುಂಗಾತೀರದಿ ರಾಜಿಪ ಯತಿಯಾ । ನೀರೆ ನೋಡೋಣ ಬಾ ॥ ಪ ॥

ವೃಂದಾವನದೊಳಗಿರುವಾತ । ವೃಂದಾರಕರನು ಪೊರೆವ ॥
ವೃಂದಗುಣಗಳಿಂ ಮೆರೆವ । ವೃಂದಾರಕತರು ಎನಿಸಿದ ಸುಜನಕೆ ॥ ೧ ॥

ಮರುತಮತಾಂಬುಧಿ ಚಂದ್ರ – ದಿನ । ಕರ ಅಘತಮಕೆ ರವೀಂದ್ರ ॥
ದುರುಳಮತಾಹಿಖಗೇಂದ್ರ । ಗುರುಕರುಣಾಕರ ಶ್ರೀರಾಘವೇಂದ್ರ ॥ ೨ ॥

ರವಿಶಶಿಕುಜಬುಧ ಗುರುವೆ । ಕವಿ ರಾಹು ಧ್ವಜ ಬಲವೇ ॥
ಇವರ ದರುಶನಕೆ ಫಲವೇ ಅಭಿ । ನವಜನಾರ್ದನವಿಠ್ಠಲನ ದಯವೇ ॥ ೩ ॥

## ವೃಂದಾವನವ ನೋಡಿರೋ - ವೆಂಕಟವಿಠಲ

ರಾಗ : ಕಲ್ಯಾಣಿ ಆದಿತಾಳ

ವೃಂದಾವನವ ನೋಡಿರೋ ಗುರುಗಳ । ವೃಂದಾವನವ ಪಾಡಿರೋ ॥ ಪ ॥
ವೃಂದಾವನ ನೋಡಿ ಆನಂದಮದವೇರಿ । ಚಂದದಿ ದ್ವಾದಶಪೌಂಡ್ರಾಂಕಿತಗೊಂಬ ॥ ಅ । ಪ ॥

ತುಂಗಭದ್ರಾನದಿಯ ತೀರದಿ ಇದ್ದ । ತುಂಗಮಂಟಪ ಮಧ್ಯದಿ ।
ಶ್ರುಂಗಾರ ತುಳಸಿ ಪದ್ಮಾಕ್ಷಸರಗಳಿಂದ । ಮಂಗಳಕರ ಮಹಾಮಹಿಮೆಯಿಂದೊಪ್ಪುವ ॥ ೧ ॥

ದೇಶದೇಶದಿ ಮೆಚ್ಚುತ ಇಲ್ಲಿಗೆ ಬಂದು । ವಾಸವಾಗಿ ಸೇವಿಪ ॥
ಭಾಷೆ ಕೊಟ್ಟಂದದಿ ಬಹುವಿಧವರಗಳ । ಸೂಸುವ ಕರಮಹಾಮಹಿಮೆಯಿಂದೊಪ್ಪುವ ॥ ೨ ॥

ನಿತ್ಯ ಸನ್ನಿಧಿ ಸೇವಿಪ ಭಕ್ತರಿಗೆಲ್ಲ । ಮತ್ತಭೀಷ್ಟವ ಕೊಡುತ ॥
ಸತ್ಯಾಧಿಗುಣಸಿಂಧು ವೆಂಕಟವಿಠ್ಠಲನ । ನಿತ್ಯ ಸನ್ನಿಧಿಯಿಂದ ನಿರುತ ಪೂಜೆಯಗೊಂಬ ॥ ೩ ॥

## ಈ ಪರಿಯ ಮಹಿಮೆ - ವೆಂಕಟೇಶವಿಠಲ

ರಾಗ : ಮಾಂಡ್ ಆದಿತಾಳ

ಈ ಪರಿಯ ಮಹಿಮೆ ಇನ್ಯಾವ ಯತಿಗಳಿಗುಂಟು ।
ಈಡಿಲ್ಲವೋ ಗುರುರಾಘವೇಂದ್ರರಿಗೆ ॥ ಪ ॥
ಪಾಪರಾಶಿಗಳನೆಲ್ಲ ಪರಿಹಾರ ಮಾಡೂವರೊ ।
ಭೂತಳದೊಳಿವರ ದಿವ್ಯಸೇವೆಯನು ಮಾಡುವರ ॥ ಅ । ಪ ॥

ರಾ ಎಂದು ನುಡಿದರೆ ರೋಗಗಳು ಬಾರವೊ ।
ಘ ಎಂದು ನುಡಿದರೆ ದುಷ್ಕರ್ಮಹಾನಿ ।
ವೇ ಎಂದು ನುಡಿದರೆ ವೈಕುಂಠ ತೋರ್ಪರೊ ।
ಇಂದ್ರನೆಂದರೆ ಸಕಲಭೋಗಗಳ ಕೊಡುತಿಹರೊ ॥ ೧ ॥

ವರತುಂಗತೀರದಲಿ ವೈಷ್ಣವಮತೋದ್ಧಾರ ।
ಪರಮಶೋಭಿತರಿವರ ನೋಡಿದವನೆ ಧನ್ಯ ॥
ಕರಿರಾಜವರದನ ಕರುಣಪಡೆದವರಿವರೊ ।
ಕುಲಕೋಟಿ ಉದ್ಧಾರ ಮಾಡುತಲಿಹರೊ ॥ ೨ ॥

ಪರಿಪರಿಯ ದೈವದೊಳು ವೆಂಕಟೇಶವಿಠ್ಠಲನೆ ಅಧಿಕ ।
ಗುರುಗಳೊಳು ಕರುಣಾಳು ಶ್ರೀರಾಘವೇಂದ್ರರು ॥
ನಂಬಿದ ಭಕ್ತರ ಕೈ ಬಿಡದೆ ಸಲಹುವರು ।
ಶೇಷಗಿರೀಶನ ದಾಸರು ಇವರು ॥ ೩ ॥

## ವೃಂದಾವನದಲಿ ನಿಂತ - ಗುರುಜಗನ್ನಾಥವಿಠಲ

ರಾಗ : ರೇಗಪ್ತಿ ತ್ರಿವಿಡಿತಾಳ

ವೃಂದಾವನದಲಿ ನಿಂತ ಸುಯತಿವರನ್ಯಾರೇ ಪೇಳಮ್ಮಯ್ಯ ॥ ಪ ॥
ಇಂದಿರೆ ರಮಣನ ಛಂದದಿ ಭಜಿಸ್ಯಾ । ನಂದದಲಿಹನ್ಯಾರೇ ಪೇಳಮ್ಮಯ್ಯ ॥
ನಂದತೀರ್ಥಮತ ಸಿಂಧುವರಕೆ ಬಾಲ । ಚಂದಿರನೆನಿಸಿಹನ್ಯಾರೇ ಪೇಳಮ್ಮಯ್ಯ ॥
ಮಂದಜಭವ ಹರಿ ಕಂದುಗೊರಳರ । ವೃಂದದಿ ಶೋಭಿಪನ್ಯಾರೇ ಪೇಳಮ್ಮಯ್ಯ ।
ಹಿಂದೆ ವ್ಯಾಸಮುನಿ ಎಂದು ಕರೆಸಿದ ರಾಘವೇಂದ್ರ ಗುರುವರ ನೀತ ನೋಡಮ್ಮ ॥ ೧ ॥

ನತಿಸುವ ಜನರಿಗೆ ಸತಿಸುತರನು ಬಲು । ಹಿತದಲಿ ನೀಡುವನ್ಯಾರೇ ಪೇಳಮ್ಮಯ್ಯ ।
ಪ್ರತಿದಿನ ತನ್ನನು ಮತಿಪೂರ್ವಕ ಬಲು । ತುತಿಪರ ಪಾಲಿಪನ್ಯಾರೇ ಪೇಳಮ್ಮಯ್ಯ ॥
ಮತಿಯುತ ಪಂಡಿತತತಿಯಭಿಲಾಷವ । ಸತತ ಪೂರ್ತಿಪನ್ಯಾರೇ ಪೇಳಮ್ಮಯ್ಯ ।
ಕ್ಷಿತಿಸುರರಿಗೆ ಸದ್ಗತಿದಾಯಕ ಮಹ । ಯತಿಕುಲವರ ಗುರುರಾಯ ಕಾಣಮ್ಮ ॥ ೨ ॥

ಮಾತೆಯು ಸುತರಲಿ ಪ್ರೀತಿಗೊಳಿಸುವ । ತಾತನ ತೆರನಿಹನ್ಯಾರೇ ಪೇಳಮ್ಮಯ್ಯ ।
ಪ್ರೇತನಾಥ ಮಹ ಭೂತಗಣಗಳ । ಭೀತಿಯ ಬಿಡಿಸುವನ್ಯಾರೇ ಪೇಳಮ್ಮಯ್ಯ ॥
ಭೂತಳ ಜನಕೃತ ಪಾತಕ ಕಾನನ । ವೀತಿಹೋತ್ರ ತೆರನ್ಯಾರೇ ಪೇಳಮ್ಮಯ್ಯ ।
ದಾತಗುರುಜಗನ್ನಾಥವಿಠಲ ನಿಜ । ದೂತ ಜನಕೆ ಮಹದಾತನೀತಮ್ಮ ॥ ೩ ॥

## ದಯಮಾಡೋ ದಯಮಾಡೋ - ಗುರುಜಗನ್ನಾಥವಿಠಲ

ರಾಗ : ಪೂರ್ವಿ ಆದಿತಾಳ

ದಯಮಾಡೋ ದಯಮಾಡೋ ॥ ಪ ॥
ಭಯಕರ ಸುಮಹದ್ಭಯಹರ ಯತಿವರ ॥ ಅ । ಪ ॥

ಮೋಕ್ಷದ ಕರುಣ ಕಟಾಕ್ಷದಿ ಎನ್ನನು । ವೀಕ್ಷಿಸಿ ನಿನ್ನ ನಿರೀಕ್ಷಿಸುವಂತೆ ॥ ೧ ॥
ಲಕ್ಷ್ಮ್ಯಾಧೀಶರ ಲಕ್ಷಿಲ್ಲದೆ ಜ್ಞಾ । ನಾಕ್ಷದಿ ತವ ಪದ ಲಕ್ಷಿಸುವಂತೆ ॥ ೨ ॥
ಸತ್ಯಾಭಿದನಪ ಮೃತ್ಯುಹರಿಸಿ ಮುದ । ವಿತ್ತು ಪಾಲಿಸಿದ ಉತ್ತಮ ಎನಗೇ ॥ ೩ ॥
ಬಲ್ಲಿದತರ ಮಹ ಪ್ರಹ್ಲಾದ ನಿನ್ನೊಳು । ನಿಲ್ಲಿಸು ಎನಮನ ಎಲ್ಲಿ ಚಲಿಸದಂತೆ ॥ ೪ ॥
ದಾತ ಗುರುಜಗನ್ನಾಥವಿಠಲನ । ದೂತಗ್ರಣಿ ಸುಖೇತರ ಕಳೆದು ॥ ೫ ॥

## ಬಂದ ಶಿರಿರಾಘವೇಂದ್ರಮೂರುತಿ - ಗುರುಜಗನ್ನಾಥವಿಠಲ

ರಾಗ : ಸಾವೇರಿ ಆದಿತಾಳ

ಬಂದ ಶಿರಿರಾಘವೇಂದ್ರಮೂರುತಿ ಮನ । ಮಂದಿರದೊಳಗೆ ಸರಸದಿ ॥ ಪ ॥
ಬಂದನು ಭಕುತನ ಬಂಧನ ಬಿಡಿಸ್ಯಾ । ನಂದನೀಡುತ ಮುದದಿಂದಲಿ ಭರದಿಂದ ॥ ಅ। ಪ ॥

ಮುದದಲಿ ಶೋಭಿಪ ವದನದೊಳೊಪ್ಪುವ । ರದನದಿ ಶೋಭಿತನು ॥
ಉದಸಿದ ಎನ್ನಯ ಹೃದಯಾಂಬರದೊಳು । ಸದಯ ಮೂರುತಿ ಧರನು ।

ಆಗಾಡಿದ ಮೃದು ನುಡಿಯಾ ಅತಿ ಭಿಡಿಯಾ । ತೋರುತಾ ಬೀರುತಾ ಪದಸಕಿತ ಸುಖನೀಡುತ ।
ಇದುಮೊದಲಾಗಿಹ ಅದ್ಭುತ ಮಹಿಮೆಯ । ಪದದಲಿ ತೋರುತ ಸದಮಲ ಮನದೊಳು ॥ ೧ ॥

ಕುಣಿದಾಡುತ ಗುಣಗಳ ಗಣಿಸುವ ಭಕ್ತರ । ದಣಿಸೆನೊ ಭವದೊಳಗೆ ॥
ಗಣಿಸುವೆ ದಾಸರ ಗಣದೊಳಗವನಿಗೆ । ಉಣಿಸುವೆ ಪರಸುಖ ಕೊನಿಗೆ ।
ಬೇಡಿದ ಇಷ್ಟವ ಕೊಡುವೆ ದುರಿತವ ತಡಿವೆ । ಪೊರೆಯುತಾ ಬೆರೆಯುತಾ ಮಣಿಸುತಾ ತಿಳಿಸುತಾ ।
ಕ್ಷಣ ಕ್ಷಣದಲಿ ವೀಕ್ಷಣದಿಂದಲಿ ಶ್ರಮ । ತೃಣ ಸಮವೋಧಣಿ ನಾ ನಿನಗೆಂದು ॥ ೨ ॥

ಧಿಟ್ಟಜ್ಞಾನ ಭಕುತಿಯ ಥಟನೆ ಕೊಡುವೊ । ಉತ್ಕಟ ಮಹಿಮನೊ ನಾನು ॥
ಪಟುತರ ಎನಪದ ಚಟುಲ ನಳಿನಯುಗ । ಷಟ್ಪದ ಸಮ ನೀನೋ ॥
ನಾನಾಡಿದ ನುಡಿ ಖರೆಯಾ ಮರೆಯಾ । ಬೇಡಲೋ ನೋಡೆಲೋ ಕೊಂಡಾಡೆಲೋ ನೀಡೆಲೋ ।
ಘಟಿಸುವೆ ಸಮಯಕೆ ಧಿಟ ಗುರುಜಗನ್ನಾಥ । ವಿಠಲನ ಹೃತ್ಸಂಪುಟದಿ ತೋರುವೆನೆಂದು ॥ ೩ ॥

## ನೋಡಿದ್ಯಾ ಗುರುರಾಯರ ನೋಡಿದ್ಯಾ - ಗುರುಜಗನ್ನಾಥವಿಠಲ

ರಾಗ : ಶಂಕರಾಭರಣ ಅಟತಾಳ

ನೋಡಿದ್ಯಾ ಗುರುರಾಯರ ನೋಡಿದ್ಯಾ ॥ ಪ ॥
ನೋಡಿದ್ಯ ಮನವೆ ನೀನಿಂದು ಕೊಂಡಾಡಿದ್ಯ ಪುರದಲ್ಲಿ ನಿಂದು ಆಹಾ ।
ಮಾಡಿದ್ಯ ವಂದನೆ ಬೇಡಿದ್ಯ ವರಗಳ ಈಡು ಇಲ್ಲದೆ ವರ ನೀಡುವೊ ಗುರುಗಳ ॥ ಅ । ಪ ॥

ಸುಂದರ ತಮ ವೃಂದಾವನದಿ ತಾನು ।
ನಿಂದು ಪೂಜೆಯ ಕೊಂಬ ಮುದದಿ ಭಕ್ತನೀ ।
ನಂದ ನೀಡುವೆನೆಂದು ತ್ವರದಿ ಇಲ್ಲಿ ।
ಬಂದು ನಿಂತಿಹನು ಪ್ರಮೋದಿ ಆಹಾ ।
ಹಿಂದಿನ ಮಹಿಮವು ಒಂದೊಂದೆ ತೋರುವಾ ।
ಮಂದಜನರ ಹೃನ್ಮಂದಿರಗತರನ್ನ ॥ ೧ ॥

ದೂರದಿಂದಲಿ ಬಂದ ಜನರ ಮಹ ।
ಘೋರ ವಿಪತ್ಪರಿಹಾರಾ ಮಾಡಿ ।
ಸಾರಿದಭೀಷ್ಟವು ಪೂರಾ ನೀಡಿ ।
ಪಾರು ಮಾಡುವ ತನ್ನ ಜನರಾ ಆಹಾ ।
ಆರಾಧಿಸುವರ ಸಂಸಾರವಾರಿಧಿಯಿಂದ ।
ದೂರಯ್ಯೆದಿಸಿ ಸುಖ ಸೂರಿ ಕೊಡುವೊರನ್ನ ॥ ೨ ॥

ನಿತ್ಯನೇಮದಿ ತನ್ನ ಪಾದ ಯುಗ ।
ಸತ್ಯಪೂರ್ವಕದಿ ನಂಬೀದ ನಿಜ ।
ಭೃತ್ಯನಪೇಕ್ಷಮಾಡೀದ ಕಾರ್ಯ ।

ಸತ್ಯ ಮಾಡುವ ಪೂಜ್ಯಪಾದ ಆಹಾ ।
ಮರ್ತ್ಯಾದಿ ಸುರರೊಳು ಎತ್ತ ನೋಡ್ತಗಿನ್ನು ।
ಉತ್ತಮರಾರಯ್ಯ ಭೃತ್ಯವತ್ಸಲರನ್ನ ॥ ೩ ॥

ಅಂತರದಲಿ ತಾನು ನಿಂತು ಜನ ।
ಸಂತತ ಕಾರ್ಯಗಳಿಂತು ಮಾಡಿ ।
ಕಂತುಪಿತಗೆ ಅರ್ಪಿಸ್ಯಂತು ತಿಳಿಸ ।
ದಂತೆ ಎಮ್ಮೊಳಗಿರೊವ್ರೊ ತಂತು ಆಹಾ ।
ಸಂತತ ಕರ್ಮಗಳಂತು ಮಾಡುತ ಜೀವ ।
ರಂತೆ ಗತಿಯು ತಾ ಪ್ರಾಂತಕ್ಕೆ ನೀಡೂವರ ॥ ೪ ॥

ಅಗಣಿತ ಮಹಿಮವಗಾಧಾ ಬಹು ।
ಸುಗುಣನಿಧಿ ಮಹಾ ಬೋಧ ನಾನು ।
ಪೊಗಳುವದೇನು ಸಮ್ಮೋದ ತೀರ್ಥ ।
ಮೊದಲಾದ ಸುರರ ಪ್ರಮೋದ  ಆಹಾ ।
ಮೊಗದಿಂದ ಶ್ರೀಗುರು ಜಗನ್ನಾಥವಿಠಲ ಸಂ ।
ಮ್ಮೊಗನಾದ ಕಾರಣ ಜಗದಿ ಮೆರೆವ್ರೊರಾನ್ನ ॥

## ರಾಯರ ನೋಡಿರ್ರೈ ಶುಭತಮ  - ಗುರುಜಗನ್ನಾಥವಿಠಲ

ರಾಗ : ಅಸಾವೇರಿ ಆದಿತಾಳ

ರಾಯರ ನೋಡಿರ್ರೈ ಶುಭತಮ ಕಾಯರ ಪಾಡಿರ್ರೈ ।
ತೋಯಜ ಪತಿ ನಾರಾಯಣ ಪದಯುಗ । ಭೃಂಗಾ ಭಕ್ತಕೃಪಾಂಗಾ ॥ ಅ । ಪ ॥

ಸುಂದರಮುಖ, ಅರವಿಂದ ಲೋಚನ, ಘ್ರಾಣ । ಕುಂದಕುಡ್ಮ ಲಸಮರದನ, ರಾಜಿತ ವದನ ॥
ಮಂದಸ್ಮಿತಯುತ ದ್ವಂದ್ವ ಓಷ್ಠ, ಶ್ರುತಿ ಛಂದವಾಗಿಹ ಚುಬಕಾ, ಫಾಲದಿ ತಿಲಕಾ ॥
ಕಂಧರಯುತ ಪೂರಂದರ ಕರಿಕರ ಛಂದವಾಗಿಹ ಬಾಹುಯುಗಳಾ, ಮಾಲಾಂಕಿತ ಕೊರಳಾ ॥
ಇಂದಿರಾಪತಿ ನಿಜಮಂದಿರವೆನಿಸುವ । ಸುಂದರ ಹೃದಯದಿ ನಾಮಾ ಹಚ್ಚಿಹ ಪ್ರೇಮಾ ॥ ೧ ॥

ಹಸ್ತದಿ ರಾಜಿಪ ಪುಸ್ತಕ ಮಣಿಮಾಲಾ । ಸ್ವಸ್ತಿಕಾಸನ ಸ್ಥಿತ ಮೋದ, ಕೃತವಿನೋದ ॥
ಮಸ್ತಕದಿಂದಲಿ ವಿಸ್ತೃತಕಾಷಾಯ । ವಸ್ತ್ರದಿ ಶೋಭಿಪ ಗಾತ್ರ ಶುಭಚರಿತ್ರ ॥
ಸ್ವಸ್ಥಮನದಿ ಪ್ರಶಸ್ತ ಹರಿಯ ಪಾದ । ಸ್ವಸ್ತಿಕ ಯುಗಳ ಧ್ಯಾನ ಮಾಡುವ ಜ್ಞಾನ ॥
ಧ್ವಸ್ತದೋಷ ಸಮಸ್ತ ಜಗತ್ತಿಗೆ । ಸ್ವಸ್ತಿದನೆನಿಸಿದ ಭೂಪಾ ಭವ್ಯಪ್ರತಾಪ ॥ ೨ ॥

ಕುಟಿಲ ವಿಮತರ ಪಟಲಾಂಧಕಾರಕೆ । ಪಟುತರ ದಿನಮಣಿ ರೂಪಾ ನಿಜ ಜನ ಸುರಪಾ ॥
ಸ್ಫುಟ ಮೋದತೀರ್ಥರ ಸ್ಫಟಿಕ ಜಲಧಿಯೊಳು । ಸ್ಫುಟಿತ ಹಾಟಕ ಚಂದ್ರಾ ಸದ್ಗುಣ ಸಾಂದ್ರ ॥
ಶಠಮಾಳ್ಪರ ಬಲು ಹಟದಿ ಶಿಕ್ಷಿಸುವ । ಚಟುಲ ಜನರ ಪರಿಪಾಲಾ ಕರುಣವಿಶಾಲಾ ॥
ಕಿಟಿರದ ಭವ ನದಿ ತಟ ಕೃತ ಮಂದಿರ । ಧಿಟ ಗುರುಜಗನ್ನಾಥವಿಠಲದೂತಾ ॥ ೩ ॥

## ಶರಣು ಶ್ರೀಗುರುರಾಘವೇಂದ್ರಗೆ - ಗುರುಜಗನ್ನಾಥವಿಠಲ

ರಾಗ : ನಾಟ ತ್ರಿವಿಡಿತಾಳ

ಶಾರಣು ಶ್ರೀಗುರುರಾಘವೇಂದ್ರಗೆ । ಶರಣು ಭಕುತಸುರೇಂದ್ರಗೆ ॥ ಪ ॥
ಶರಣು ಶರಣರ ಪೊರೆವ ಕರುಣಿಗೆ । ಶರಣು ಸುರವರಧೇನುಗೆ ॥ ಅ । ಪ ॥

ಮಧ್ವಮತ ಶುಭವಾರ್ಧಿ ಚಂದ್ರಗೆ । ಸಿದ್ಧಸಾಧನ ಮೂರ್ತಿಗೆ ॥
ಬದ್ಧ ಶ್ರೀಹರಿ ದ್ವೇಷಿ ಮಾಯಿಗಳ । ಗೆದ್ದ ರಘುಕುಲ ರಾಮದೂತಗೆ ॥ ೧ ॥

ನಿತ್ಯ ನಿರ್ಮಲ ಪುಣ್ಯಗಾತ್ರಗೆ । ಭೃತ್ಯಜನ ಪರಿಪಾಲಗೆ ॥
ಸತ್ಯ ಸಂಕಲ್ಪಾನುಸಾರದಿ । ನಿತ್ಯ ಕರ್ಮವ ಮಾಳ್ಪಧೊರಿಗೆ ॥ ೨ ॥

ಪಾತಕಾಂಬುಧಿ ಕುಂಭಸಂಭವ । ಆರ್ತಜನ ಪರಿಪಾಲಗೆ ॥
ದಾತ ಗುರುಜಗನ್ನಾಥವಿಠಲನ । ಪ್ರೀತ ಸುಖಮಯ ದಾತ ಯತಿಗೆ ॥ ೩ ॥

## ರಾಘವೇಂದ್ರ ಕೃಪಾ ಸಾಗರ - ಗುರುಜಗನ್ನಾಥವಿಠಲ

ರಾಗ : ಆಹರಿ ಏಕತಾಳ

ರಾಘವೇಂದ್ರ ಕೃಪಾ ಸಾಗರ ಜನ ಪಾ । ಪೌಘ ದೂರ ತೇ ನಮೋ ನಮೋ ॥ ಪ ॥
ಮಾಗಧರಿಪು ಮತ ಸಾಗರ ಝುಷ ಸಮಾ । ಮೋಘ ಮಹಿಮ ತೇ ನಮೋ ನಮೋ ॥ ಅ । ಪ ॥

ದಾರಿತ ಪರಿಮತ ವಾರಣ ತತಿ ಪರಿ । ಪೂರಿತ ಕರುಣಾಸಾಗರ ನಮೋ ನಮೋ ॥
ವಾರಿತ ತಮ, ಸ್ವೀಕಾರಿತ ಹರಿಮತ । ಧಾರುಣಿ ಸುರವರ, ಧೀರ ನಮೋ ॥ ೧ ॥

ಸಾಧಿತ ರಘುವರ, ಬೋಧಿತ ಭಿದಮತ । ಬಾಧಿತ ಪರರ ವಿವಾದ ನಮೋ ॥
ಶೋಧಿತ ಹರಿಮತ, ಮೋದಿತ ಸುರ, ಸಂ । ಪಾದಿತ ಹರಿಪದ, ದೇವ ನಮೋ ॥ ೨ ॥

ಸೇವಿತ ಯದುವರ, ಪಾವಿತ ನಿಜಜನ । ಶ್ರಾಮಿತ ಹರಿಕಥ ಪಾಲಯ ಮಾಂ ॥
ಕೋವಿದ ಕುಲ ಸಂಭಾವಿತ, ನಿಜಜನ । ಜೀವಪ್ರದ, ಹೇ ಪಾಲಯ ಮಾಂ ॥ ೩ ॥

ಕಾಮಿತ ಚಿಂತಾಮಣಿನಿಭ ತ್ವಂ । ಕಾಮದುಹೋಪಮ ಪಾಲಯ ಮಾಂ ॥
ಸಾಮವೇದ್ಯ ಶ್ರೀರಾಮನ ಪದಯುಗ । ತಾಮರಸಾಲಿಯೆ ಪಾಲಯ ಮಾಂ ॥ ೪ ॥

ಪಾತಕವನಕುಲ ವೀತಿಹೋತ್ರ ನಿಭ । ತಾತ ಪಾಲಿತ ನಿಜದೂತ ನಮೋ ॥

ದಾತ ಗುರುಜಗನ್ನಾಥವಿಠಲ ಪದ । ಪಾಥೋಜ ಭ್ರಮರ ತೇ ನಮೋ ನಮೋ ॥ ೫ ॥

## ಇಂಥಾ ಗುರುಗಳಾ ಕಾಣೆನೋ - ಗುರುಜಗನ್ನಾಥವಿಠಲ

ರಾಗ : ಶ್ರೀರಾಗ ತ್ರಿವಿಡಿತಾಳ

ಇಂಥಾ ಗುರುಗಳ ಕಾಣೆನೋ ಈ ಜಗದೊಳು ನಾ ।
ಇಂಥಾ ಗುರುಗಳನೆಂದು ಕಾಣೆನೋ ॥ ಪ ॥
ನಂತ ಚೇತನರಂತರ ಬಹಿರದಿ ನಿಂತು ಕರ್ಮವವರಂತೆ ಮಾಳ್ಪಾ
ನಂತ ಮಹಿಮಾನಂತನಾಂಶಜರಿಂಥಾ ॥ ಅ । ಪ ॥

ತುಂಗಾ ತೀರದಿ ನಿವಾಸಾ ಮಂತ್ರಾಲಯಕೀಶ । ತುಂಗ ವಿಕ್ರಮ ಜಗದೀಶಾ ಶ್ರೀಹರಿ ದಾಸಾ ॥
ಮಂಗಲಾತ್ಮಕ ವೃಂದಾವನ ದೇಶಾ ಸಾರಿದ ವ್ರತೀಶಾ ।
ಮಂಗಲ ಮಹಿಮ ರಂಗನ ಕರುಣಾಪಾಂಗ ಪಡೆದ ಕೃ ।
ಪಾಂಗ ಯತಿಕುಲೋತ್ತುಂಗ ಮಾಯಿ ಮಾ । ತಂಗ ಸಂಘಕೆ ಸಿಂಗ ದುಷ್ಟ ಭು ।
ಜಂಗ ಗಣವಿಹಂಗ ಸ್ವಮತೋ । ತ್ತುಂಗ ವಾರಿಜ ಭೃಂಗ ಮನ್ಮನೋ ।
ರಂಗ ಬಿಂಬನ ಇಂಗಿತಜ್ಞರ ಸಂಗ ನೀಡಿ । ಕಂಗಳಿಗೆ ತಾವು ಕಂಗೊಳಿಪರಿಂಥಾ ॥ ೧ ॥

ಮೇದಿನಿ ತಳದಲಿ ಜನಿಸೀ ಸುಖತೀರ್ಥರ ಭಜಿಸೀ । ಭೇದಮತವನೆ ಸಾಧಿಸೀ ವಾದದಿ ಜೈಸಿ ।
ಮಾಧವನೆ ಸರ್ವೋತ್ತಮನೆನಿಸಿ ಸ್ವಮತವ ಸ್ಥಾಪಿಸಿ । ಬೋಧಿಸಿ ತತ್ತ್ವವ ಭೇದಿಸಿ ಪರಮತ ।
ಛೇದಿಸಿ ಕುಮತಿಯ ಶೋಧಿಸಿ ತತ್ತ್ವದ । ಹಾದಿಯ ಹಿಡಿಸಿ ಮೋದಕೊಡುವ ಪಂಚ ।
ಭೇದವ ತಿಳಿಸೀ ಸಾದರ ತನ್ನಯ ಪಾದಸೇವೆಯ ।
ಮೋದವ ನೀಡುವ ಮೇದಿನೀ ದಿವಿಜಾರಾಧಿತ ಪದಯುಗ ।
ಶೋಧಿಸಿ ಜನಮನೋ ಖೇದಗೊಳಿಪ ಭ । ವೋದಧಿ ದಾಟಿಸಿ ಶ್ರೀದನ ತೆರದಲಿ
ಮೇದಿನಿಯಾಳುವರಿಂಥಾ ॥ ೨ ॥

ಧಿಟ್ಟ ಗುರುಜಗನ್ನಾಥವಿಠಲ ದೂತಾ । ಸೃಷ್ಟಿಯೊಳಗತಿ ವಿಖ್ಯಾತಾ ನೆನಿಸಿದ ಯತಿನಾಥಾ ।
ಕುಷ್ಠಾದಿ ರೋಗದ ಘಾತಾ ಮಾಡುವ್ರೊ ದಾತಾ । ಇಷ್ಟಾರ್ಥವಾ ತಾ ಸೃಷ್ಟಿಗೆ ಬೀರುವ ।
ಶಿಷ್ಟಜನರನುತ್ಕೃಷ್ಟದಿ ಪಾಲಿಪ । ಎಷ್ಟು ಪೇಳುವುದೋ ಉತ್ಕೃಷ್ಟನ ಗುಣಗಳ ।
ಭ್ರಷ್ಟರರಿಯರೆಲೆ ಶಿಷ್ಟರು ಬಲ್ಲರು । ಇಷ್ಟೆ ಅಲ್ಲವೀತನ ವಿಶಿಷ್ಟ ಮಹಿಮೆಗ ।
ಳೆಷ್ಟು ಪೇಳಲವಶಿಷ್ಟವೆನಿಪವ್ರೋ । ದೃಷ್ಟಿಹೀನರಿಗೆ ದೃಷ್ಟಿ ನೀಡುವ ।
ದೃಷ್ಟ ಮಾತ್ರದಿ ತಿಷ್ಟಿಬಡಿಸುವ್ರೊರಿಂಥಾ ॥ ೩ ॥

## ರಾಯನೆಂದರೆ ಗುರು ರಾಯ - ಗುರುಜಗನ್ನಾಥವಿಠಲ

ರಾಗ : ಅಸಾವೇರಿ ತ್ರಿವಿಡಿತಾಳ

ರಾಯನೆಂದರೆ ಗುರುರಾಯ ಸದ್ಗುಣಗಣ । ಕಾಯ ಸುಜನ ಗೇಯ ಮಹರಾಯ ॥ ಪ ॥

ಮಾಯಾ ಮಯ ಭವ ತೋಯನಿಧಿಯೊಳು । ಬಾಯಿ ಬಿಡುವೆನುಪಾಯದಿಂದಲಿ ।
ಕಾಯೋ ದಾತನೆ ನೋಯದಂದದಿ ಕಾಯೋ ಎನ್ನನು ॥ ಅ । ಪ ॥

ನಿನ್ನಾ ನಂಬಿದ ಮಾನವಾ ಭವದೀ ಬನ್ನಾ ಬಡದೆ ತಾನಿರುವಾ ।
ಘನ್ನಾ ಮಹಿಮ ಪಾವನ್ನ ತವ ಪಾದಾ । ಮನ್ನಾ ದೊಳಗೆ ನಿತ್ಯಾ ಚನ್ನಾಗಿ ಭಜಿಸುತ ।
ಧನ್ಯನೆನಿಸುವ ಹೊನ್ನು ಹಣಗಳೂ । ನಿನ್ನ ಇಚ್ಛೆಲಿ ತಾವೆ ಬಪ್ಪವು ।
ಘನ್ನ ಮಹಿಮನೇ ನಿನ್ನ ನಂಬಿದೆ । ಎನ್ನ ಪಾಲಿಸ ನನ್ಯ ರಕ್ಷಕ ॥ ೧ ॥

ಅನ್ನಾ ವಸನವಿಲ್ಲದೆ ನಿತ್ಯಾ ಅನ್ಯಾರ ಬೇಡಿಸೊದಿದೇ ।
ಘನ್ನಾತೆ ನಿನಗಿದೆ ನನ್ಯ ಭಕ್ತನ ಪರ । ರನ್ನಕ್ಕೆ ಗುರಿಮಾಡಿ ಬನ್ನ ಬಡಿಸಿದರೆನ್ನ ।
ನಿನ್ನ ಸೇವಕ ನಿನ್ನ ಪೂಜಕ ನಿನ್ನ ಧ್ಯಾನವ ಮನ್ನದಿಂದಾ ।
ನಿನ್ನ ತ್ಯಜಿಸಿ ಅನ್ಯ ದೈವರ ಮನ್ನಿಸೆನೋ ಪಾವನ್ನಮೂರುತಿ ॥ ೨ ॥

ಹೊಟ್ಟೆಗೋಸುಗ ದೇಶಾ ತಿರುಗಿ ದೇಹಾ । ಕೆಟ್ಟು ಪೋಗಿಹದೋ ಹೀಗಾಗೀ ।
ಎಷ್ಟು ಪೇಳಲಿ ಎನ್ನ ದುಷ್ಟ ಬುದ್ಧಿಲಿ ಜ್ಞಾನ । ನಷ್ಟವಾಗಲು ಬಹು ಭ್ರಷ್ಟಮಾರ್ಗವ ಸೇರಿ ।
ದುಷ್ಟಮತಿಯಲಿ ಶಿಷ್ಟ ದ್ವೇಷವ । ಕಟ್ಟಿ ಕಾದಿದೆ ನಷ್ಟ ತಿಳಿಯದೆ ।
ಕೆಟ್ಟುಪೋಗುವೆ ಥಟ್ಟನೆ ನೀ ಪೊರಿ । ಧಿಟ್ಟಾ ಗುರುಜಗನ್ನಾಥವಿಠಲ ದೂತಾ ॥ ೩ ॥

## ಎಂತು ಬಣ್ಣಿಸಲಮ್ಮಯ್ಯಾ - ಗುರುಜಗನ್ನಾಥವಿಠಲ

ರಾಗ : ಶಂಕರಾಭರಣ ಏಕತಾಳ

ಎಂತು ಬಣ್ಣಿಸಲಮ್ಮಯ್ಯಾ ಈ ಗುರುವರರ ॥ ಪ ॥
ಎಂತು ಬಣ್ಣಿಪೆ ನಾನಂತನಾಂಶ ಜಗ । ದಂತರದೊಳಗಾನಂತ ಮಹಿಮರ ॥ ಅ । ಪ ॥

ಸುರವರನಗರಸಮ ವರಮಂತ್ರಸದನ ಜರಿದು ।
ಸ್ಥಿರವಾಗೀ ಪುರದಲಿ ಮೆರೆಯುತಲಿಹರನ್ನ ॥ ೧ ॥

ಪೂರ್ವಯುಗದೊಳು ಸಾರ್ವಭೌಮನೆನಿಸಿ ।
ಪಾರ್ವರ ಪೊರೆಯಂ ಪೂರ್ವ ಯತಿಯಾದ ॥ ೨ ॥

ದಿನದಿನದಲ್ಲಿ ಮಹ ಕನಕಾಭಿಷೇಕ ಮಾಳ್ಪ ।
ಧನಿಕರ ತೆಜಿಸಿ ನಿರ್ಧನಿಕಗೊಲಿದಿಹರನ್ನ ॥ ೩ ॥

ಕ್ಷೀರಶೇಚನ ನಿತ್ಯ ಸಾರ ಪಂಚಾಮೃತ ಬಿಟ್ಟು ।
ಕೀರುತಿ ಮಾಳ್ಪ ಜನರ ಸೇರಿಕೊಂಡಿಹರನ್ನ ॥ ೪ ॥

ದಾತರೆನಿಸಿ ಜಗದಿ ಖ್ಯಾತರಾಗಿ ಗುರುಜಗ ।
ನ್ನಾಥವಿಠಲನೊಲಿಸಿ ದೂತ ಜನರ ಪೊರೆವೊರ ॥ ೫ ॥

## ಎಂಥಾ ದಯವಂತನೋ - ಗುರುಜಗನ್ನಾಥವಿಠಲ

ರಾಗ : ಧನಶ್ರೀ ತ್ರಿವಿಡಿತಾಳ

ಎಂಥಾ ದಯವಂತನೋ ಸಂತಾರ ನಾಥನೋ ॥ ಪ ॥
ಕಂತೂ ಜನಕಾನ ಪ್ರಿಯ್ಯಾನೋ ಅ । ನಂತಾ ನಂತಾ ಮಹಿಮನೋ ॥ ಅ । ಪ ॥

ರಮ್ಯಾ ಗುಣಾ ಪೂರ್ಣನೋ ಅ । ಗಮ್ಯಾ ಸಚ್ಚರಿತಾನೋ ॥
ನಮ್ಯಾನತರಾ ಪೊರೆವಾನೋ ಈತ ನಮ್ಮೆಲ್ಲಾರ ಸಲಹೋನೋ ॥ ೧ ॥

ಪ್ರಾಣಾವೇಶಾಯುತನೋ ಜಗ । ತ್ರಾಣಾ ತಾನಾಗಿಹನೋ ॥
ಕ್ಷೋಣೀಯೋಳ್ವಿಖ್ಯಾತಾನೋ ಎನ್ನ । ಪ್ರಾಣಾಗಳಿಗೆ ನಾಥನೋ ॥ ೨ ॥

ಕರುಣಾಶಾಲಿ ಎನಿಪಾನೋ ತನ್ನ । ಚರಣಾ ಸೇವಾ ನೀಡುವನೋ ॥
ಶರಣಾಬ್ಜ ತರಣೀ ಸಮನೋ ಅಂತಃ । ಕರುಣಾದಲ್ಲಿರುವಾನೋ ॥ ೩ ॥

ಜನನೀ ಜನಕಾರೆನಿಪನೋ ಸಕಲ । ಜನರೀಗ ಸಮ್ಮತನೋ ॥
ಜನುಮಾ ಜನುಮದಲೀತನೋ ನಿಶ್ಚಯ । ಎನಗೆ ತಾತನೋ ॥ ೪ ॥

ಭೂತಾಳದೊಳು ವಿಖ್ಯಾತನೋ ನಿಜ । ದೂತಾ ಜನರಿಗೆ ಪ್ರೀತನೋ ॥
ನೀತಾ ಗುರುಜಗನ್ನಾಥಾವಿಠಲ । ಪ್ರೀತಿಯ ತಾ ಪೊಂದಿಹನೋ ॥ ೫ ॥

## ಮಾಮವ ಯತಿಕುಲೋತ್ತುಂಗ - ಗುರುಜಗನ್ನಾಥವಿಠಲ

ರಾಗ : ಪೂರ್ವಿ ಏಕತಾಳ

ಮಾಮವ ಯತಿಕುಲೋತ್ತುಂಗ ॥ ಪ ॥
ಶ್ರೀ ಮನೋಹರ ರಘು ರಾಮ ಪದದ್ವಯ । ತಾಮರಸ ಯುಗ ಭೃಂಗ ॥ ಅ । ಪ ॥

ನಿರ್ಜಿತ ಷಡ್ವರ್ಗಾಜಿತ ಹರಿಪದ । ಭರ್ಜಿತ ದೋಷ ತರಂಗ ॥ ೧ ॥
ಸಾಧಿತ ಹರಿಮತ ಭೇದಿತಪರಮತ । ಛೇದಿತ ಮಾಯಿ ಪತಂಗ ॥ ೨ ॥
ತೋಷಿತಯದುವರ ಪೋಷಿತದ್ವಿಜಕುಲ । ದೂಷಿತ ದುರ್ಜನ ಸಂಘ ॥ ೩ ॥
ಮೋದಿತಸುಜನಾರಾಧಿತ ಸುರಗುಣಾ । ಸಾದಿತ ಶ್ರೀಹರಿಯಂಗ ॥ ೪ ॥
ದಾತ ಗುರುಜಗನ್ನಾಥವಿಠಲಪದ । ಪಾಥೋದ್ಭವ ಯುಗ ಸಂಗಾ ॥ ೫ ॥

## ಗುರುರಾಜಾ ಗುರುರಾಜಾ - ಗುರುಜಗನ್ನಾಥವಿಠಲ

ರಾಗ : ಆನಂದಭೈರವಿ ಆದಿತಾಳ

ಗುರುರಾಜಾ ಗುರುರಾಜಾ ॥ ಪ ॥
ಧರಣಿಸುರರ ಸುರಭೂಜಾ ॥ ಅ । ಪ ॥

ಜ್ಞಾನಿಗಳರಸನೆ ಧ್ಯಾನಿಪ ಜನರಿಗೆ । ಜ್ಞಾನವು ಪಾಲಿಸೊ ಜ್ಞಾನಿಜನನಾಥ ॥ ೧ ॥
ಜ್ಞಾನಿಲ್ಲದೆ ಭವ ಕಾನನ ಚರಿಸುವೆ । ಮಾನಸದಲಿ ತವ ಧ್ಯಾನವ ಸಲಿಸೈ ॥ ೨ ॥
ಅನ್ಯರ ಭಜಿಸದೆ ನಿನ್ನನೆ ನಿತ್ಯದಿ । ಮನ್ನದಿ ಭಜಿಸುವ ಉನ್ನತ ಮತಿ ನೀಡೈ ॥ ೩ ॥
ನೀಚರ ಮನಿಯಲಿ ಯಾಚಿಪ ಗೋಸುಗ । ಯೋಚಿಪ ಮನವನು ಮೋಚನೆ ಮಾಡೈ ॥ ೪ ॥
ಯಾತಕೆ ಭವದಲಿ ಈತರೆ ಬಳಲಿಪಿ । ದಾತನೆ ಗುರುಜಗನ್ನಾಥವಿಠಲ ದೂತಾ ॥ ೫ ॥

## ದಯಾನಿಧೇ ಶ್ರೀರಾಘವೇಂದ್ರ - ಗುರುಜಗನ್ನಾಥವಿಠಲ

ರಾಗ : ಬೇಹಾಗ್ ಏಕತಾಳ

ದಯಾನಿಧೇ ಶ್ರೀರಾಘವೇಂದ್ರ ಗುರುವೇ । ಕಾಮಿತ ಸುರತರುವೇ ॥ ಪ ॥
ದಯಾಕರನೆ ಭವ ಭಯಾ ಹರಿಸಿ ತವ । ಜಯಾಕರ ಪಾದ ಪಯೋಜ ಯುಗ ತೋರೋ ॥ ಅ । ಪ ॥

ಧರಾತಳದಿ ಸುರತರೂ ಸುರಭಿವರ । ತೆರಾದಿ ಕಾಮಿತ ಕರಾದು ಮೆರೆಯೋ ॥ ೧ ॥
ಗಡಾನೆ ತವಪದ ಜಡಾಜ ಭಜಿಸುವ । ದೃಢಾವೆ ಕೊಡೊ ಎನ್ನೊಡೇಯ ನೀನೇ ॥ ೨ ॥
ಎಷ್ಟೊ ಪೇಳಲಿ ಎನ್ನ ಕಷ್ಟಾರಾಶಿಗಳ್ಯತಿ । ಶ್ರೇಷ್ಠಾನೆ ಕಳಿಯೊ ಉತ್ಕೃಷ್ಟಾ ಮಹಿಮ ಗುರೋ ॥ ೩ ॥
ಮೋಕ್ಷಾದ ಎನ್ನನು ವೀಕ್ಷಿಸಿ ಈಗಲೆ । ಸುಕ್ಷೇಮ ನೀಡುತ್ತಾ ಪೇಕ್ಷಾಪೂರ್ತಿಸೊ ಗುರೋ ॥ ೪ ॥
ದಾತಾನೆ ಎನ್ನಯ ಮಾತಾನು ಲಾಲಿಸೊ । ನೀತಾ ಗುರುಜಗನ್ನಾಥವಿಠಲ ಪ್ರಿಯ ॥ ೫ ॥

## ನೀ ಪಾಲಿಸೋ ಗುರುರಾಯ - ಗುರುಜಗನ್ನಾಥವಿಠಲ

ರಾಗ : ಶಂಕರಾಭರಣ ಏಕತಾಳ

ನೀ ಪಾಲಿಸೋ ಗುರುರಾಯ ಎನ್ನ । ಕಾಪಾಡೀಗ ಮಹರಾಯ ॥ ಪ ॥
ಭೂಪತಿ ನೀ ಎನ್ನ ಅಪದ್ಬಾಂಧವ । ಶ್ರೀಪತಿ ಪದ ಪ್ರಿಯ ಈಪರಿ ಮಾಡದೆ ॥ ಅ । ಪ ॥

ಪಾಪಿಗಳೊಳಗೆ ಹಿರಿಯನು ನಾ । ನಿಷ್ಪಾಪಿಗಳರಸೆ ಗುರುರಾಯ ॥
ಅಪಾರ ಜನುಮದಿ ಬಂದಿಹ । ತಾಪತ್ರಯ ಕಳಿ ಮಹರಾಯಾ ॥ ೧ ॥

ನೀಚರ ಒಳಗೆ ನೀಚನೊ ಪಾಪ । ಮೋಚನೆ ಮಾಡೋ ಗುರುರಾಯ ॥
ಯೋಚನೆ ಇಲ್ಲದೆ ಅನ್ಯರ ಅನುದಿನ । ಯಾಚಿಸಿ ಕೆಟ್ಟೆನೊ ಮಹರಾಯಾ ॥ ೨ ॥

ದೀನರ ಒಳಗೆ ದೀನನು ನಾನ್ಯೆ । ದಾನಿಗಳರಸೇ ಗುರುರಾಯ ॥

ಜ್ಞಾನವು ಇಲ್ಲದೆ ನಾನು ನನದೆಂದು । ಹೀನ ಮತ್ಯಾದೆನೊ ಗುರುರಾಯ ॥ ೩ ॥

ಅನ್ನವು ಇಲ್ಲದೆ ಅನ್ಯರ ಮನೆಯಲಿ । ಕುನ್ನಿಯಾದನೋ ಗುರುರಾಯ ॥
ನಿನ್ನನೆ ನಂಬಿ ಅನ್ಯರಬೇಡೊದು । ಘನ್ನತಿ ನಿನಗೆ ಮಹರಾಯಾ ॥ ೪ ॥

ದಾತನೆ ನಿನ್ನಾ ಪೋತನು ನಾನೀ । ರೀತಿಯ ಮಾಳ್ಪರೆ ಗುರುರಾಯ ।
ನೀತ ಗುರುಜಗನ್ನಾಥವಿಠಲ ಪದ । ದೂತನು ನೀನೆ ಮಹರಾಯಾ ॥ ೫ ॥

## ಕಾಯೋ ಕಾಯೋ - ಗುರುಜಗನ್ನಾಥವಿಠಲ

ರಾಗ : ಶ್ರೀ ಏಕತಾಳ

ಕಾಯೋ ಕಾಯೋ ॥ ಪ ॥
ಕಾಯೊ ಕಾಯೊ ಗುರುರಾಯನೆ ತವ ಪದ । ತೋಯಜ ಯುಗ ಎನ್ನ ಕಾಯದಲಿಟ್ಟು ॥ ಅ । ಪ ॥

ಕ್ಷುಲ್ಲಕ ಮನುಜರ ಸೊಲ್ಲನೆ ನೀಗಿಸಿ । ಹಲ್ಲನೆ ಮುರಿಯುವ ಬಲ್ಲಿದ ನೀನೇ ॥ ೧ ॥
ಕ್ಷುದ್ರಮನುಜರೋ ಪದ್ರವ ಕಳೆದು । ಭದ್ರ ಭಕುತಿಯ ಉದ್ರೇಕವಿತ್ತು ॥ ೨ ॥
ತ್ವತ್ಸೇವಾ ಜನರಲಿ ಮತ್ಸರ ಮಾಡುವ । ಕುತ್ಸಿತ ಜನತತಿ ವಿಚ್ಛೇದ ಮಾಡುವ ॥ ೩ ॥
ನಿನ್ನಯ ಜನರನ ಮನ್ನಣೆ ಮಾಡದೆ । ಬನ್ನವ ಬಡಿಪರ ಖಿನ್ನರ ಮಾಡೀ ॥ ೪ ॥
ದೂತರ ನಿಚಯಕೆ ಈ ತೆರ ಚಿಂತೆಯು । ಯಾತಕೆ ಗುರುಜಗನ್ನಾಥವಿಠಲ ದೂತಾ ॥ ೫ ॥

## ಶ್ರೀ ಗುರುವರ ಮಾಂ ಪಾಲಯ - ಗುರುಜಗನ್ನಾಥವಿಠಲ

ರಾಗ : ಆರಭಿ ಆದಿತಾಳ

ಶ್ರೀ ಗುರುವರ ಮಾಂ ಪಾಲಯ ಭೋ !
ಶ್ರೀ ಗುರುವರ ಮಾಂ ಪಾಲಯ ಭೋ ! ॥ ಪ ॥

ದೀನಂ ತ್ವತ್ಪದಧೀನಂ ಸದ್ಗುಣಹೀನಂ । ಮಾಂ ಪಾಲಯ ಭೋ ॥ ಅ । ಪ ॥

ಆರ್ತಿಂ ಹರ, ಭವ ವಾರ್ತಿಂ, ತವ ಸಂ । ಕೀರ್ತನಂ ದಿಶ ಸದಾ ಕರುಣಾಕರ ಭೋ ॥ ೧ ॥
ರುದ್ಧಂ , ಭವಗುಣ ಬದ್ಧಂ ಜನಸುಖಿ । ರುದ್ಧಂ, ಗುರೋ ಮಾಮುದ್ಧರ ಭೋ ॥ ೨ ॥
ಮಗ್ನಂ, ಸ್ತ್ರೀಸುತ ಲಗ್ನಂ, ತ್ವತ್ಪದ । ಲಗ್ನಂ, ಕುರು ಕರುಣಾಕರ ಭೋ ॥ ೩ ॥
ಪುತ್ರಂ, ಸಜ್ಜನ ಮಿತ್ರಂ, ತ್ವದ್ಗುಣ । ಚಿತ್ರಂ ಜ್ಞಾಪಯ ಶತೃಹ ಭೋ ॥ ೪ ॥
ಹೀನಂ, ದುರ್ಗುಣ ಮಾನಿಂ, ತ್ವದ್ಗುಣ । ಜ್ಞಾನಿಂ ಕುರು ಕರುಣಾಕರ ಭೋ ॥ ೫ ॥
ಭಕ್ತಂ, ಸಜ್ಜನ ಸಕ್ತಂ, ವಿಷಯ ವಿ- । ರಕ್ತಂ ಕುರು ಕರುಣಾಕರ ಭೋ ॥ ೬ ॥
ದೂತಂ, ಭವ ಭಯ ಭೀತಂ, ಸದ್ಗುಣ ಖ್ಯಾತಂ, ಯತಿವರ ಕುರು ಮಾಂ ಭೋ ॥ ೭ ॥

ಪೋತಂ, ಶ್ರುತಿ ಸ್ಮೃತ್ಯ ದೀತಂ, ಪಾಪ ವಿ– । ಧೂತಂ ಕುರು ಸತ್ವರ ಮಾಂ ಭೋ ॥ ೮ ॥
ದಾಸಂ ಸ್ತ್ರೀ ಕರ ವಾಸಂ, ತ್ವತ್ಸಹ । ವಾಸಂ ಸಂದಿಶ ಸಂತತ ಭೋ ॥ ೯ ॥
ಮೂಢಂ, ಭವನಿಧಿ ಗಾಢಂ, ತ್ವತ್ಪದ । ರೂಢಂ, ಗುರುವರ ಕುರು ಮಾಂ ಭೋ ॥ ೧೦ ॥
ಚಾರಂ, ನಿರ್ಗತ ಸಾರಂ, ಬಂಧ ವಿ । ದೂರಂ ಕುರು ಕರುಣಾರ್ಣವ ಭೋ ॥ ೧೧ ॥
ಬಾಲಂ, ತ್ವದ್ಗುಣ ಶೀಲಂ, ತ್ವತ್ಪದ । ಲೋಲಂ ಕುರು ತ್ವಂ ಕುರು ಮಾಂ ಭೋ ॥ ೧೨ ॥
ಪೋತಂ, ಸ್ವಾಮ್ಯವ ಧೂತಂ, ವಿಸ್ತೃತ । ಖ್ಯಾತಿಂ ಕಾರಯ ಕಾರಯ ಭೋ ॥ ೧೩ ॥
ವ್ಯರ್ಥಂ, ದಾಪಯ ಮೇರ್ಥಂ ಕುರು ಸುಕೃ । ತಾರ್ಥಂ ಯತಿವರ ಮಾಮವ ಭೋ ॥ ೧೪ ॥
ದಾತಾ ಗುರುಜಗನ್ನಾಥವಿಠಲ । ದೂತಾಗ್ರೇಸರ ಪಾಲಯ ಭೋ ॥ ೧೫ ॥

## ಶೇಷಾಂಶ ಪ್ರಹ್ಲಾದರಾಯಾ - ಗುರುಜಗನ್ನಾಥವಿಠಲ

ರಾಗ : ಅಸಾವೇರಿ ಝಂಪೆತಾಳ

ಶೇಷಾಂಶ ಪ್ರಹ್ಲಾದರಾಯಾ ಎನ್ನ । ದೋಷ ಎಣಿಸದೆ ಕಾಯೊ ಜೀಯಾ ॥ ಪ ॥

ಕಂಡ ಕಂಡವರ ಭಜಿಸೀ ಬೇಡಿ । ಬೆಂಡಾದೆ ನಿನ್ನಂಘ್ರಿ ತ್ಯಜಿಸೀ ॥
ತೋಂಡವತ್ಸಲ ಕರುಣೆ ಸಲಿಸೀ ಪಾದ । ಪುಂಡರೀಕ್ಯನ್ನೊಳಗೆ ಇರಿಸಿಕಾಯೋ ॥ ೧ ॥

ಮಾಡಬಾರದ ಕೃತ್ಯವಾ ನಾ ಬಲು । ಮಾಡಿದೆ ಗೃಹಕೃತ್ಯವಾ ॥
ಬೇಡದಲೆ ಭೃತ್ಯತ್ವವಾ ಈ ದೋಷ । ನೋಡದಲೆ ಭಕ್ತತ್ವವಾ ನೀಡೊ ॥ ೨ ॥

ದೀನ ಜನಪಾಲ ನಿನ್ನಾ ರೂಪ । ಧೇನಿಸದೆ ಮಾನಿನಿಯರನ್ನಾ ॥
ಧ್ಯಾನ ಮಾಡಿದೆ ಬಿಡದೆ ಘನ್ನಾ ಗತಿ । ಏನು ಪೇಳಯ್ಯ ಎನಗೆ ಮುನ್ನಾ ಸ್ವಾಮಿ ॥ ೩ ॥

ಗುರುರಾಘವೇಂದ್ರರಾಯ ಎನ್ನ । ಕರೆದು ಕೈ ಪಿಡಿಯೊ ಮಹರಾಯ ॥
ತರಿಯೊ ಪಾತಕವೆನ್ನ ಜೀಯಾ । ಶರಣು ಪೊಕ್ಕೆನೊ ನಿನಗೆ ನಾನಯ್ಯಾ ಕರುಣೀ ॥ ೪ ॥

ಮಾತ ಪಿತ ಭ್ರಾತ ಬಂಧೂ ಎನಗೆ । ನೀತಗತಿಕುಲ ಗೋತ್ರವೆಂದೂ ॥
ದಾತ ನಿನ್ನ ದೂತನೆಂದೂ ಬಂದ । ನಾಥನನು ನೀ ಕಾಯುವುದು ಪ್ರಭುವೇ ॥ ೫ ॥

ಕರುಣಸಾಗರನೆ ಈತ ತವರೂಪ । ಸ್ಮರಣೆ ನೀಡೆನಗೆ ಬ್ಯಾಗಾ ॥
ಶರಣು ಪೊಕ್ಕವನ ವೇಗಾ ಭವ । ಅರಣ ದಾಟಿಸುವಂಥ ಯೋಗಾ ಪೇಳಿ ॥ ೬ ॥

ಹೋಗುತಿದೆ ಹೊತ್ತು ಪದುಮಾಕ್ಷ ಹ್ಯಾಗೆ । ಆಗುವುದೊ ನಿನ್ನ ಅಪರೋಕ್ಷ ॥
ಬಾಗಿ ಬೇಡುವೆ ಕಲ್ಪವೃಕ್ಷ ಸುರಧೇನೊ । ಜಾಗು ಮಾಡದೆ ಸಲಿಸ್ಯನ್ನಪೇಕ್ಷಾ ಸ್ವಾಮಿ ॥ ೭ ॥

ಧೀರ ಗುರುರಾಜ ಕೇಳೋ ಎನ್ನ । ಪಾರ ದೋಷಗಳನ್ನೆ ತಾಳೋ ॥
ಘೋರ ಅಜ್ಞಾನ ಕೀಳೋ ಪರಲೋಕ । ಸೇರಿಸೆನ್ನನು ಕೃಪಾಳೋ ಸ್ವಾಮಿ ॥ ೮ ॥

ಎಷ್ಟು ಪೇಳಲಿ ಎನ್ನ ತಾತಾ ಕೃಪಾ । ದೃಷ್ಟಿಯಲಿ ನೋಡು ನಾನಿನ್ನ ಪೋತಾ ॥
ಧಿಟ್ಟ ನೀ ಗುರುಜಗನ್ನಾಥವಿಠಲನ । ನಿನ್ನೊಳಗೆ ತೋರೋ ದಾತಾ ಖ್ಯಾತಾ ॥ ೯ ॥

## ರಥವಾನೇರಿದ ಯತಿವರನ್ಯಾರೇ - ಗುರುಜಗನ್ನಾಥವಿಠಲ

ರಾಗ : ರೇಗುಪ್ತಿ ಏಕತಾಳ

ರಥವಾನೇರಿದ ಯತಿವರನ್ಯಾರೇ ಪೇಳಮ್ಮಯ್ಯಾ ॥ ಪ ॥
ವಿತತ ಮಹಿಮಾ ನತ ಜನರನತಿ । ಹಿತದಿ ಪಾಲಿಸುವ ಅತುಲಮಹಿಮ ಕಾಣಮ್ಮ ॥ ಅ । ಪ ॥

ಧರೆಯೊಳು ವೈಭವದಿಂದಲಿ । ಮೆರೆಯುವನ್ಯಾರೇ ಪೇಳಮ್ಮಯ್ಯಾ ।
ಪರಮಾದ್ಭುತ ಚರಿಯುವ ಮಾಡುತ । ಸರಿಯಿಲ್ಲದಿರುವ ನ್ಯಾರೇ ಪೇಳಮ್ಮಯ್ಯಾ ॥
ಸ್ಮರಿಸುವ ಭಕುತರ ಪರಿ । ಪರಿ ಸಲಹುವನ್ಯಾರೇ ಪೇಳಮ್ಮಯ್ಯಾ ।
ಹರಿಭಕ್ತಾಗ್ರಣಿ ಎನಿಪ ಯತಿಕುಲ । ಗುರುವರ ರಾಘವೇಂದ್ರ ಕಾಣಮ್ಮಾ ॥ ೧ ॥

ಸ್ತುತಿಸುವ ಜನರಿಗೆ ಸತಿಸುತ ಸಂಪದ । ವತಿಶಯ ನೀಡುವನ್ಯಾರೇ ಪೇಳಮ್ಮಯ್ಯಾ ।
ಮತಿರಹಿತರಿಗೆ ಸುಮತಿಯ ನೀಡುವನ । ದ್ಭುತ ಮಹಿಮನು ಯಾರೇ ಪೇಳಮ್ಮಯ್ಯಾ ॥
ಇತರ ದಿವಿಜರಿಗಸಾಧ್ಯವೆನಿಸುವ । ಅತುಲ ಪರಾಕ್ರಮನ್ಯಾರೇ ಪೇಳಮ್ಮಯ್ಯಾ ।
ಭೂತಳಜನನಾಥನೆನಿಸಿ ಮಹಾ । ಭೂತಿದಾಯಕ ರಾಘವೇಂದ್ರ ಕಾಣಮ್ಮಾ ॥ ೨ ॥

ಭೂತಳ ಜನರ ವ್ರಾತಕೆ ನಿಜಸುಖ । ದಾತನು ಯಾರೇ ಪೇಳಮ್ಮಯ್ಯಾ ।
ಭೂತ ಪ್ರೇತ ಪಿಶಾಚ ಸುಮಹ । ದ್ಭೀತಿಯ ಬಿಡಿಸುವನ್ಯಾರೇ ಪೇಳಮ್ಮಯ್ಯಾ ॥
ಪಾತಕವನಕುಲವೀತಿಹೋತ್ರ ಸುಖ । ವ್ರಾತದನೆನಿಸುವನ್ಯಾರೇ ಪೇಳಮ್ಮಯ್ಯಾ ।
ದಾತ ಗುರುಜಗನ್ನಾಥವಿಠಲ ಪದ । ದೂತನೆನಿಪ ಗುರುರಾಯ ಕಾಣಮ್ಮ ॥ ೩ ॥

## ಸ್ವಸ್ತಿ ಶ್ರೀ ಜಯ ಮಂಗಳಂ - ಗುರುಜಗನ್ನಾಥವಿಠಲ

ರಾಗ : ಮಧ್ಯಮಾವತಿ ಅಟತಾಳ

ಸ್ವಸ್ತಿ ಶ್ರೀ ಜಯಮಂಗಳಂ ॥ ಪ ॥
ಸ್ವಸ್ಥಚಿತ್ತದಿ ಹರಿಯ ಭಜಿಪಗೆ । ಹಸ್ತಿವರದನ ದಾಸವರ್ಯಗೆ ॥
ಹಸ್ತದಿಂದಖಿಳಾರ್ಥ ದಾತಗೆ । ಸ್ವಸ್ತಿಕರ ಗುರುರಾಘವೇಂದ್ರಗೆ ॥ ೧ ॥

ನತಿಪಜನ ಸುರಧೇನು ಎನಿಪಗೆ । ಸತತ ಸ್ವಾಶ್ರಿತ ಪಾಲಗೆ ।
ವಿತತ ಸನ್ಮತಿದಾತ ಖ್ಯಾತಗೆ । ತುತಿಪರನುದಿನ ಪೊರೆವೊ ನಾಥಗೆ ॥ ೨ ॥

ಪಾತಕಾಂಬುಧಿಕುಂಭಜಾತಗೆ । ಪಾತಕಾದ್ರಿಕುಲಿಶರೂಪಗೆ ॥

ದಾತ ಗುರುಜಗನ್ನಾಥವಿಠಲ । ದೂತ ಜನಕತಿ ಪ್ರೀತಗೆ ॥ ೩ ॥

## ಸ್ವಾಮಿ ಲಾಲಿ - ಗುರುಜಗನ್ನಾಥವಿಠಲ

ರಾಗ : ಆನಂದಭೈರವಿ ಆದಿತಾಳ

ಸ್ವಾಮಿ ಲಾಲಿ ಭಕ್ತ ಪ್ರೇಮಿ ಲಾಲಿ । ಕಾಮದೆನಿಪ ಗುರುಸಾರ್ವಭೌಮ ಲಾಲಿ ॥ ಪ ॥
ಇಂದ್ರಲಾಲಿ ರಾಘವೇಂದ್ರ ಲಾಲಿ । ಸಾಂದ್ರಭಕ್ತಕುಮುದ ಪೂರ್ಣಚಂದ್ರ ಲಾಲಿ ॥ ೧ ॥
ತರುಣಿ ಲಾಲಿ ನಿಜ ಕರುಣಿ ಲಾಲಿ । ಶರಣ ಜನರ ಕಾಯ್ವ ಗುಣಪೂರ್ಣ ಲಾಲಿ ॥ ೨ ॥
ದೇವ ಲಾಲಿ ನಿಜಭಾವ ಲಾಲಿ । ಭಾವಿಸುವರ ನಿತ್ಯ ನೀ ಕಾವ ಲಾಲಿ ॥ ೩ ॥
ರಾಜ ಲಾಲಿ ಕಲ್ಪಭೂಜ ಲಾಲಿ । ರಾಜಿಸುವ ಯತಿಕುಲತೇಜ ಲಾಲಿ ॥ ೪ ॥
ದಾತಲಾಲಿ ನಿಜತಾತ ಲಾಲಿ । ಪ್ರೀತ ಗುರುಜಗನ್ನಾಥವಿಠಲದೂತ ಲಾಲಿ ॥ ೫ ॥

## ವಿನಯದಿಂದಲಿ ನಮಿಸುವೆನಾ - ವರದೇಶವಿಠಲ

ರಾಗ : ಧನಶ್ರಿ ಅಟತಾಳ

ವಿನಯದಿಂದಲಿ ನಮಿಸುವೆನಾ ವೃಂದಾವನದಿ ರಾಜಿಪ ರಾಘವೇಂದ್ರಗುರುವರನ ॥ ಪ ॥
ದುರಿತವಾರಣ ಪಂಚಾನನ ನರ । ಹರಿರೂಪ ಸ್ತಂಭದಿ ಪ್ರಕಟಗೈಸಿದನ ॥
ಹರಿಭಕ್ತಾಗ್ರಣಿ ಎಂದೆನಿಪನ ನಾರ । ದರ ಉಪದೇಶ ಗರ್ಭದಿ ಕೈಕೊಂಡಿಹನ ॥ ೧ ॥

ಸಿರಿವ್ಯಾಸತೀರ್ಥರೆನಿಪನ ಪುರಂ । ದರ ದಾಸಾರ್ಯರಿಗುಪದೇಶ ಗೈದವನ ॥
ವರ ಚಂದ್ರಿಕಾ ರಚಿಸಿದ ದುಷ್ಟ । ಪರಮತಾದ್ರಿಗಳಿಗೆ ಕುಲಿಶನೆನಿಪನ ॥ ೨ ॥

ಶ್ರೀಸುಧೀಂದ್ರಕರಾಬ್ಜಜನ ದಿವ್ಯ । ಭಾಸುರ ಪರಿಮಳ ಗ್ರಂಥಕರ್ತನ ॥
ಮೀಸಲಮನದಿ ಭಜಿಪರ ದೋಷ । ನಾಶನಗೈಸಿ ಪೋಷಿಸುವಶಕ್ತನ ॥ ೩ ॥

ವರಮಂತ್ರಸದ್ಮನಿಲಯನ ಶ್ರೀ । ಗುರುಮಧ್ವಮತದುರಂಧರನೆನಿಸುವ ॥
ಹರಿಪ್ರೀತಿಪೂರ್ಣಪಾತ್ರನ ಈ । ಧರೆಯೊಳು ಬಹುಪರಿಮೆರೆವ ಮುನಿಪನ ॥ ೪ ॥

ತುಂಗಾಭದ್ರತೀರವಾಸನ ಶುಭ । ಮಂಗಳಚರಿತ ಕಮಂಡಲಧರನ ॥
ರಂಗ ವರದೇಶವಿಠಲನ ಪದ । ಭೃಂಗ ಯತಿಕುಲ ಕುಜಾರ್ಕ ಸನ್ನಿಭನ ॥ ೫ ॥